www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 6 ಜೂನ್ 2013
Volume : IX Issue : VI June 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

**ಒಳ ಪುಟಗಳಲ್ಲಿ**

1. ಪ್ರಕಟಣೆ
2. ಆತ್ಮೀಕ ಬೆಳವಣಿಗೆ – ವಯಸ್ಕರ ಸ್ವರ
3. ಪ್ರಶ್ನೋತ್ತರಗಳ ಸ್ವರ
4. ಸ್ಥಳೀಯ ಮತ್ತು ವಿದೇಶ ಸುದ್ಧಿ
5 ಪ್ರಾರ್ಥನಾ ಸ್ವರ
6. ಅನಾಥರ ಸ್ವರ
7 ಸ್ವಪಾಣ್ ಪಾರ್ಕಿ
8. ಯೇಸುಕ್ರಿಸ್ತನಿಗಾಗಿ ಹಸಿವೆವುಳ್ಳವನಾಗಿರು
9. ಮಹಿಳೆಯರ ಸ್ವರ
10. ಕರ್ತನ ಸನ್ನಿಧಿಯೂ ಆತನ ಪವಿತ್ರಪಾದವೂ
11. ಆರೋಗ್ಯ ಸ್ವರ
12 ಜಾಹೀರಾತು
13. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಕ್ರಿಸ್ತನಲ್ಲಿ ಸಹೋದರ, ಸಹೋದರಿಯರೆಲ್ಲರಿಗೂ ನನ್ನ ವಂದನೆಗಳು. ಕೈಸ್ತರು ಯಾರು ಎಂದು ಕೇಳಿದರೆ ಅನೇಕರು ಕ್ರೈಸ್ತ ಕುಟುಂಬದಲ್ಲಿ ಹುಟ್ಟಿದವರು, ಶಿಶು ದೀಕ್ಷಾಸ್ನಾನ ತೆಗೆದುಕೊಂಡವರು, ದೃಢೀಕರಣ ಆದವರು, ಕೊರಳಿಗೆ ಶಿಲುಬೆ ಹಾಕಿದವರು, ಯೋಹಾನ, ಪೇತ್ರ ಎಂದು ಹೆಸರಿಟ್ಟವರು, ಭಾನುವಾರ ಚರ್ಚ್‌ಗೆ ಹೋಗುವವರು, ಚರ್ಚಿನ ನಿಯಮಗಳನ್ನು ಪಾಲಿಸುವವರು ಎಂದು ಹೀಗೆ ಅನೇಕರು ಅನೇಕ ವಿಧವಾದ ಉತ್ತರಗಳನ್ನು ಕೊಡಬಹುದು. ದೇವರ ವಾಕ್ಯದ ಮೂಲಕ ಕ್ರೈಸ್ತತ್ವದ ಬಗ್ಗೆ ತಿಳಿದುಕೊಳ್ಳೋಣ.

ಸತ್ಯವೇದದಲ್ಲಿ ಕ್ರೈಸ್ತ ಎಂಬ ವಾಕ್ಯ 4 (ನಾಲ್ಕು) ಕಡೆಗಳಲ್ಲಿದೆ (ಅ.ಕೃ. 11:26, 26:28, 1 ಕೊರಿ. 5:11 ಮತ್ತು 1 ಪೇತ್ರ. 4:16).

**ಕೈಸ್ತತ್ವ ಅಂದರೇನು ?**

1) ಹೊಸ ಜನನ (ಯೋಹಾ. 3:5).
2) ಪುತ್ರತ್ವ (ಯೋಹಾ. 1:12–13).
3) ಬೆಳವಣಿಗೆ (2 ಪೇತ್ರ. 3:18).
4) ಪ್ರಕಾಶಿಸಲ್ಪಟ್ಟ ಜೀವಿತ (ಮತ್ತಾ. 5:16).
5) ಹೊಸ ಉಡುಪು (ಯೆಶಾ. 61:10).
6) ಉತ್ತಮವಾದ ಕಟ್ಟಡ (ಮತ್ತಾ. 7:24–27).
7) ಅನ್ಯೋನ್ಯತೆ (ಅ.ಕೃ. 2:42).
8) ಕಲಿಯುವುದು (ಮತ್ತಾ. 11:28–30, ಯೋಹಾ. 8:31–32).
9) ಸೇವೆ (1 ತಿಮೊ. 6:8).
10) ಯಜ್ಞ (ರೋಮ. 12:1–2).
11) ಕ್ರಿಸ್ತನೊಂದಿಗೆ ನಡೆಯುವ ಜೀವಿತ (ಕೊಲೊ. 2:6–7).
12) ಓಟ (ಇಬ್ರಿ. 12:12).
13) ಯುದ್ಧ (1 ತಿಮೊ. 6:12).
14) ಜಯದ ಜೀವಿತ (1 ಯೋಹಾ. 5:4).
15) ನಿತ್ಯ ಜೀವಿತ (ಯೋಹಾ. 17:3, 1 ಯೋಹಾ. 2:25).

1. ನಮ್ಮೊಳಗೆ ಕ್ರಿಸ್ತನಿರಬೇಕು. 2. ನಾವು ಕ್ರಿಸ್ತನಲ್ಲಿರಬೇಕು. 3. ಪರಿಶುದ್ಧ ಜೀವಿತ.

ಪ್ರಿಯರೇ, ನಮ್ಮನ್ನು ನಾವೇ ಪರೀಕ್ಷಿಸಿಕೊಳ್ಳೋಣ ಮತ್ತು ನಿಜವಾದ ಕ್ರೈಸ್ತರಾಗಿ ಮಾರ್ಪಡೋಣ.

ದೇವರು ನಿಮ್ಮನ್ನು ಆಶೀರ್ವದಿಸಲಿ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ದೇವರು ಮನುಷ್ಯನನ್ನು ಸೃಷ್ಟಿಸಿ 3 ವಿಧವಾದ ಆಶೀರ್ವಾದವನ್ನು ಅನುಗ್ರಹಿಸಿದ್ದು**

ಆದಿ. 1:28 1) ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ.

2) ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ.

3) ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಅಂದನು.

ದೇವರು ಮಾನವನಿಗೆ ಕೊಟ್ಟ 3 ಆಶೀರ್ವಾದಗಳಲ್ಲಿ 3 ನೆಯದು ಎಲ್ಲಾದರ ಮೇಲೆ ಅಧಿಕಾರ ನಡೆಸುವಂತದ್ದಾಗಿತು. ಮಾನವನು ತನ್ನ ಪಾಪದ ನಿಮಿತ್ತವಾಗಿ ಆಶೀರ್ವಾದವನ್ನು ಕಳೆದುಕೊಂಡು ಪಾಪದ ಮತ್ತು ಸೈತಾನನ ಗುಲಾಮನಾಗಿ ಜೀವಿಸಬೇಕಾಯಿತು. ಈ ಲೋಕದಲ್ಲಿ ಜೀವಿಸುವ ಮನುಷ್ಯನು ಸಾಮಾನ್ಯವಾಗಿ 2 ವಿಧವಾದ ಅಧಿಕಾರದ ಕೆಳಗೆ ಜೀವಿಸುತ್ತಾನೆ.

1) ಮಾನವನ ಅಧಿಕಾರ, 2) ಸೈತಾನನ ಅಧಿಕಾರ.

1) **ಮಾನವನ ಅಧಿಕಾರ:** ಗಂಡನಾಗಿ ಹೆಂಡತಿಯ ಮೇಲಿರುವ ಅಧಿಕಾರವಾಗಿರಬಹುದು, ತಂದೆ ತಾಯಿಯಾಗಿ ಮಕ್ಕಳ ಮೇಲಿರುವ ಅಧಿಕಾರವಾಗಿರಬಹುದು, ಗುರುವಾಗಿ ಶಿಷ್ಯನ ಮೇಲಿರುವ ಅಧಿಕಾರವಾಗಿರಬಹುದು, ಮಂತ್ರಿಯಾಗಿ ಪ್ರಜೆಗಳ ಮೇಲಿರುವ ಅಧಿಕಾರವಾಗಿರಬಹುದು ಇತ್ಯಾದಿ.

2) **ಸೈತಾನನ ಅಧಿಕಾರ :** ಯಾವಾಗ ಮನುಷ್ಯನು ದೇವರಿಗೆ ಅವಿಧೇಯನಾಗಿ ಸೈತಾನನಿಗೆ ವಿಧೇಯನಾಗಿ ಪಾಪಮಾಡಿದನೋ ಆಗಲೇ ತನ್ನ ಆತ್ಮದಲ್ಲಿ ದೇವರ ಜೀವವನ್ನು, ಅನ್ಯೋನ್ಯತೆಯನ್ನು ಕಳೆದುಕೊಂಡು ಸೈತಾನನಿಗೆ ಗುಲಾಮನಾದನು. ಸೈತಾನನು ಮನುಷ್ಯನ ಜೀವಿತದಲ್ಲಿರುವ ಸುಖ, ಶಾಂತಿ, ನೆಮ್ಮದಿ, ಆರೋಗ್ಯ ಆಶೀರ್ವಾದ, ಸಮೃದ್ಧಿ, ನಿತ್ಯಜೀವ, ರಕ್ಷಣೆ, ಭದ್ರತೆ ಇವೆಲ್ಲವುಗಳನ್ನು ಕದ್ದುಕೊಂಡನು. **"ಕಳ್ಳನು ಕದ್ದುಕೊಳ್ಳುವುದಕ್ಕೂ ಹಾಳುಮಾಡವುದಕ್ಕೂ ಬರುತ್ತಾನೆ ಹೊರತು ಮತ್ತಾವುದಕ್ಕೂ ಬರುವುದಿಲ್ಲ. ನಾನಾದರೋ ಅವುಗಳಿಗೆ ಜೀವ ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು"** (ಯೋಹಾ. 10:10).

**"ದೇವರು ನಮ್ಮನ್ನು ಅಂಧಕಾರದ ಧೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು"** (ಕೊಲೊ. 1:13). ಇಂದು ನಾವು 2ನೆಯದಾದ ಸೈತಾನನ ಧೊರೆತನದಿಂದ ಕರ್ತನಾದ ಯೇಸುಕ್ರಿಸ್ತನ ಮೂಲಕವಾಗಿ ಬಿಡುಗಡೆ ಹೊಂದಿದ್ದೇವೆ. ಆದರೆ ಮೊದಲನೆಯದಾದ ಮಾನವನ ಅಧಿಕಾರ ಈ ಲೋಕವು ಇರುವ ತನಕ ಇರುತ್ತದೆ.

ಸತ್ಯವೇದವನ್ನು ಸರಿಯಾಗಿ ಅಭ್ಯಾಸ ಮಾಡುವುದಾದರೆ ದಾನಿಯೇಲನ ಕಾಲದಿಂದ ಅಂತ್ಯದ ಕಾಲದವರೆಗೆ ಅಥವಾ ಸಾವಿರ ವರ್ಷಗಳ ಕೊನೆಯವರೆಗೆ ಸಂಭವಿಸತಕ್ಕಂತಹ 7 ಸಾಮ್ರಾಜ್ಯದ ಕಾಲಾವಧಿಯನ್ನು ನೋಡಬಹುದು. ಇದಕ್ಕಿಂತ ಮುಂಚೆ ಅನೇಕ ರಾಜರು, ಅರಸರು, ಚಕ್ರವರ್ತಿಗಳು ಭೂಲೋಕವನ್ನು ಆಳಿದ್ದಾರೆ.

1) **ಬಾಬೆಲ್ ಸಾಮ್ರಾಜ್ಯ:-** ದಾನಿ. 2:32-38, ಈ ಸಾಮ್ರಾಜ್ಯದ ಕಾಲಾವಧಿ ಕ್ರಿಸ್ತ ಪೂರ್ವ. 606ರಿಂದ ಕ್ರಿಸ್ತ ಪೂರ್ವ 536.

2) **ಮೇದ್ಯ ಮತ್ತು ಪಾರಸಿಯಾ ಸಾಮ್ರಾಜ್ಯ:** ದಾನಿ. 2:39 ಈ ಸಾಮ್ರಾಜ್ಯದ ಕಾಲಾವಧಿ ಕ್ರಿಸ್ತ ಪೂರ್ವ. 536 ರಿಂದ ಕ್ರಿಸ್ತ ಪೂರ್ವ. 330.

3) **ಗ್ರೀಕ್ ಸಾಮ್ರಾಜ್ಯ:-** ದಾನಿ. 2:39 ಈ ಸಾಮ್ರಾಜ್ಯದ ಕಾಲಾವಧಿ ಕ್ರಿಸ್ತ ಪೂರ್ವ. 330 ರಿಂದ ಕ್ರಿಸ್ತ ಪೂರ್ವ. 146.

4) **10 ಸಂಯುಕ್ತ ರಾಜ್ಯಗಳು (ಯುರೋಪಿಯನ್, ಯುನಿಯನ್):-** ದಾನಿ. 2:41 ಈಗಾಗಲೇ ಅಸ್ಥಿತ್ವದಲ್ಲಿದೆ.

5) **ರೋಮ ಸಾಮ್ರಾಜ್ಯ:-** ದಾನಿ. 2:40 ಈ ಸಾಮ್ರಾಜ್ಯದ ಕಾಲವಧಿ ಕ್ರಿಸ್ತ ಪೂರ್ವ. 146 ರಿಂದ ಕ್ರಿಸ್ತ ಶಕ 146.

ಯೆಹೋವನೇ, ಅಭಿಮುಖನಾಗಿ ನನ್ನನ್ನು ಬಿಡಿಸು; ನಿನ್ನ ಕೃಪೆಯ ನಿಮಿತ್ತವೇ ನನ್ನನ್ನು ರಕ್ಷಿಸು (ಕೀರ್ತ. 6:4).

6) **ಕ್ರಿಸ್ತ ವಿರೋಧಿಯ ಸಾಮ್ರಾಜ್ಯ:** ಈ ಸಾಮ್ರಾಜ್ಯದ ಕಾಲಾವಧಿ 7 ವರ್ಷಗಳು ಮತ್ತು ಇದು ಅಧಿಕಾರಕ್ಕೆ ಬರುವಂಥ ಸಮಯ ಈ ಲೋಕದಲ್ಲಿರುವ ಯೇಸುಕ್ರಿಸ್ತನ ಸಭೆ ಪರಲೋಕಕ್ಕೆ ಎತ್ತಲ್ಪಟ್ಟ ಕೂಡಲೇ.

7) **ಯೇಸುಕ್ರಿಸ್ತನ ನಿತ್ಯವಾದ ಸಾಮ್ರಾಜ್ಯ:–** ಲೂಕ. 1:33, ದಾನಿ. 2:44–45 ಈ ಸಾಮ್ರಾಜ್ಯದ ಆರಂಭ ಯೇಸುಕ್ರಿಸ್ತನೊಂದಿಗೆ ಒಂದು ಸಾವಿರ ವರ್ಷಗಳ ಆಳ್ವಿಕೆ ಮುಗಿದ ಕೂಡಲೆ ಆರಂಭಿಸುವುದು.

ಈ ಲೋಕದ ಯಾವುದೇ ಆಡಳಿತವು ಮನುಷ್ಯರನ್ನು ತೃಪ್ತಿ ಪಡಿಸಲಾಗುವುದಿಲ್ಲ, ಜನರನ್ನು ಸಂತೋಷಪಡಿಸಲಾಗುವುದಿಲ್ಲ. ಪ್ರತಿಯೊಂದು ಆಡಳಿತದಲ್ಲೂ ಜನರು ಕಣ್ಣೀರನ್ನು ಸುರಿಸಿದ್ದಾರೆ. ಪ್ರಥಮ ಮನುಷ್ಯನಾದ ಆದಾಮನಿಗೆ ಒಂದು ದು:ಖ ಇಲ್ಲದ, ನೋವಿಲ್ಲದ, ಶಾಪವಿಲ್ಲದ, ವೇದನೆ ಕಣ್ಣೀರಿಲ್ಲದ ಅಧಿಕಾರ ನಡೆಸಲು ದೇವರು ಅವಕಾಶವನ್ನು ಕೊಟ್ಟನು. ಆದರೆ ಆದಾಮನು ಅವಿಧೇಯುತೆಯಿಂದ ಅದನ್ನು ಕಳಕೊಂಡಾಗ ಅಂಥದೇ ಒಂದು ಒಳ್ಳೆಯ ಆಡಳಿತವನ್ನು ದೇವರ ಹೃದಯದಲ್ಲಿರುವ ಕಣ್ಣೀರು, ದು:ಖ, ಶಾಪ, ರೋಗಗಳಲ್ಲಿನ ಆಡಳಿತವನ್ನು ದೇವರು ತನ್ನ ಮಗನ ಮೂಲಕವಾಗಿ ಈ ಲೋಕಕ್ಕೆ ಕೊಡಲು ಜಯಿಸಿದನು. ಅದುವೇ ಸಾವಿರ ವರ್ಷಗಳ ಆಡಳಿತ ಮಿಲ್ಲೇನಿಯಂ ಆಗಿದೆ.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

---

## ಆತ್ಮೀಕ ಹೊದಿಕೆ

**ನೀವು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಈಗಾಗಲೇ ಸೇವೆಮಾಡುತ್ತಿದ್ದೀರಿ. ಒಂದು ವೇಳೆ ನೀವು ಸ್ವತಂತ್ರ ಸೇವಕರಾಗಿದ್ದರೆ ಪಾ॥ ಸುನಿಲ್ ಜಾನ್ ಡಿ'ಸೋಜಾರವರ ಮೂಲಕ ಆತ್ಮೀಕ ಹೊದಿಕೆಯನ್ನು ಹೊಂದಬಹುದು.**

***ಹೊಂದಲು ಇಚ್ಛಿಸುವವರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9844550512, 9902334941, 08202002781**

---

## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

ನಿಮ್ಮ ಕಣಜಗಳು ಯಾವಾಗಲೂ ತುಂಬಿರುವಂತೆಯೂ ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗುವಂತೆಯೂ ನಿಮ್ಮ ದೇವರಾದ ಯೆಹೋವನು ನಿಮಗೆ ಶುಭವನ್ನು ಅನುಗ್ರಹಿಸುವನು (ಧರ್ಮೋ. 28:8).

# ಆತ್ಮೀಕ ಬೆಳವಣಿಗೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1) **ನಾವು ಬೆಳೆಯಬೇಕಾದರೆ ಆಹಾರ ಮುಖ್ಯವಾಗಿದೆ:** ಸರಿಯಾದ ಸಮಯಕ್ಕೆ ನಿಯಮಿತ ಪೌಷ್ಟಿಕ ಆಹಾರ ತಿನ್ನುವ ಮಕ್ಕಳು ಪುಷ್ಟಿಯಾಗಿ ಬೆಳೆಯುವುದನ್ನು ನಾವು ಕಾಣುತ್ತೇವೆ. ಅದಲ್ಲದೆ ಗಿಡಗಳಿಗೆ ಸರಿಯಾದ ಗೊಬ್ಬರ ನೀರು ಹಾಕಿದ ನಂತರ ಅದು ಸಮೃದ್ಧಿಯಾಗಿ ಬೆಳೆದು ಹೂ ಹಣ್ಣು ಬಿಟ್ಟು ಫಲಭರಿತವಾಗುವುದು. ಅದೇ ರೀತಿ ನಾವು ಆತ್ಮೀಕವಾಗಿ ಬೆಳೆಯಬೇಕಾದರೆ ದೇವರ ವಾಕ್ಯವನ್ನು ನಮ್ಮ ಆತ್ಮೀಕ ಆಹಾರವನ್ನಾಗಿ ನಾವು ತೆಗೆದುಕೊಳ್ಳಬೇಕು. ಪ್ರವಾದಿಯಾದ ಯೆರೆಮೀಯನು ಬರೆಯುತ್ತಾನೆ, **"ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರ ಮಾಡಿಕೊಂಡೆನು, ನಿನ್ನ ನುಡಿಗಳು ನನಗೆ ಹರ್ಷವೂ, ಹೃದಯಾನಂದವೂ ಆದವು"** (ಯೆರೆ. 15:16). ಅನೇಕ ವಿಶ್ವಾಸಿಗಳು ದೇವರ ವಾಕ್ಯವನ್ನು ಅಸಡ್ಡೆ ಮಾಡಿ ಆತ್ಮೀಕವಾಗಿ ಸತ್ತಂತ ಉದಾಹರಣೆಗಳನ್ನು ನಾನು ಎಷ್ಟೋ ನೋಡಿದ್ದೇನೆ. ಆದಿ ಸಭೆಯ ವಿಶ್ವಾಸಿಗಳು ಮನೆ ಮನೆಗಳಲ್ಲಿ ಸೇರಿ ಬರುತ್ತಿದ್ದರು. ಅಲ್ಲಿ ಸಹೋದರರ ಅನ್ಯೋನ್ಯತೆ, ಅಪೋಸ್ತಲರ ಬೋಧನೆಗಳಲ್ಲಿ ರೊಟ್ಟಿ ಮುರಿಯುವುದು, ಪ್ರಾರ್ಥನೆಗಳಲ್ಲಿ ನಿರತರಾಗಿರುತ್ತಿದ್ದರು (ಅ.ಕೃ. 2:42). ಆದ್ದರಿಂದಲೇ ಅವರಲ್ಲಿ ಮಾತ್ರವಲ್ಲ, ಸಭೆಗಳಲ್ಲಿಯೂ ಉಜ್ಜೀವನ ಬಂದಿರುವುದನ್ನು ನಾವು ಕಾಣಬಹುದು. ಪ್ರಿಯ ದೇವ ಮಗುವೆ, ನೀನು ದೇವರ ವಾಕ್ಯದಲ್ಲಿ ಎಷ್ಟು ಬೆಳೆದಿದ್ದೀ ಎಂಬುವುದನ್ನು ತಿಳಿದುಕೋ ಕೆಲವರಂತೂ ಮನೆಮನೆಗಳಲ್ಲಿ ಪ್ರಾರ್ಥನೆ ನಡೆಯುತ್ತಿದ್ದರೂ ತಾವೂ ಭಾಗವಹಿಸದೆ ಟಿ.ವಿ ಮುಂದೆ ಕೂತಿರುತ್ತಾರೆ. ಯಾವುದೇ ಕೂಟ, ಉಪವಾಸ, ವಿಶೇಷ ಕೂಟಗಳು ಇದ್ದರೂ ಇವರು ತಲೆಕೆಡಿಸಿಕೊಳ್ಳದೆ ತಮ್ಮ ಆತ್ಮೀಕ ಜೀವಿತವನ್ನು ಬರೀ ಭಾನುವಾರಕ್ಕೆ ಅದರಲ್ಲೂ ಬರೀ 1–2 ಗಂಟೆಗೆ ಮೀಸಲಿಡುತ್ತಾರೆ. ಸಭೆಯಲ್ಲಿ ಯಾವ ಪ್ರಾರ್ಥನೆ, ಕೂಟ ನಡೆದರೂ ಇವರು ಭಾನುವಾರ ಮಾತ್ರ ಲೇಟಾಗಿ ಆರಾಧನೆಗೆ ಬಂದು ಸೇವಕರು ವಾಕ್ಯ ಕೊಡುವಾಗ ಮೊಬೈಲ್‌ನಲ್ಲಿ ಎಸ್.ಎಮ್.ಎಸ್. ಕಳುಹಿಸುತ್ತಾ, ಗೇಮ್ ಆಡುತ್ತಾ, ಕುಚೇಷ್ಟೆ ಮಾಡುತ್ತಾ, ಸಮಯ ಕಳೆಯುವರು. ಕೆಲವರಂತೂ ಚಿಕ್ಕ ಮಕ್ಕಳೊಂದಿಗೆ ಬರುವ ತಾಯಿಯಂದಿರು ವಾಕ್ಯದ ಸಮಯದಲ್ಲೇ ಮಕ್ಕಳಿಗೆ ಊಟ ತಿನ್ನಿಸಲು ಹೋಗಿ ವಾರದಲ್ಲಾದರೂ ಸಿಗುವ ಆತ್ಮೀಕ ಆಹಾರವನ್ನು ಕಳೆದುಕೊಳ್ಳುವರು. ಇಂಥವರೆಲ್ಲಾ ಆತ್ಮೀಕವಾಗಿ ಬೆಳೆಯಲು ಅಸಾಧ್ಯ. ಖಂಡಿತವಾಗಿ ಇವರಿಗೆ ಆತ್ಮೀಕ ಸಾವು ನಿಶ್ಚಯ ಎಚ್ಚರಿಕೆ.

ದೇವರ ವಾಕ್ಯ ತಿಳಿಸುತ್ತದೆ, **"ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶಮಾಡಿಕೊಳ್ಳಿರಿ, ಬುದ್ಧಿ ಹೇಳಿಕೊಳ್ಳಿರಿ"** (ಕೊಲೊ. 3:16). ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಬೇಕಾದರೆ ನಾವು ದೇವರ ವಾಕ್ಯದಲ್ಲಿ ಬೆಳೆದರೆ ತಾನೆ ?

**ವಯಸ್ಕರ ಸ್ವರ**

ಸ್ವತ: ಯೇಸುವೂ ಕೂಡಾ ಹೇಳಿದ್ದಾರೆ, ಮನುಷ್ಯರು ಬರೀ ರೊಟ್ಟಿಯಿಂದ ಮಾತ್ರ ಬದುಕುವುದಿಲ್ಲ ಬದಲಾಗಿ ದೇವರ ಬಾಯಿಂದ ಬರುವ ಮಾತಿನಿಂದಲೂ ಬದುಕುವನು (ಮತ್ತಾ. 4:4). ದೇವರ ವಾಕ್ಯ ಯೌವನಸ್ಥರಿಗೆ ಮುಖ್ಯವಾಗಿ ಎಚ್ಚರಿಸುತ್ತದೆ, ದೇವರ ವಾಕ್ಯವು ಯೌವನಸ್ಥರಲ್ಲಿ ನೆಲೆಗೊಂಡರೆ ಸೈತಾನನ್ನು ಜಯಿಸಲು ಸಾಧ್ಯ (1 ಯೋಹಾ. 2:14). ಹಾಗೂ ದೇವರ ವಾಕ್ಯವನ್ನು ಗಮನಿಸಿ ನಡೆಯುವುದರಿಂದಲೇ ತನ್ನ ನಡತೆಯನ್ನು ಸರಿಪಡಿಸಲು ಸಾಧ್ಯ (ಕೀರ್ತ. 119:9). ಪ್ರಿಯ ದೇವ ಮಗುವೆ ಸಭೆಯಲ್ಲಿ ದೇವರು ತನ್ನ ಸೇವಕನ ಮೂಲಕವಾಗಿ (ವಾಕ್ಯದ ಮೂಲಕವಾಗಿ) ಎಚ್ಚರಿಸುವಾಗ ನೀನು ತಾತ್ಸರ ಮಾಡಬೇಡ. **"ಶಿಕ್ಷೆಯನ್ನು ಕೈಕೊಳ್ಳುವವನು ಜೀವದ ಮಾರ್ಗವನ್ನು ತೋರಿಸುವನು; ಗದರಿಕೆಯನ್ನು ಕೈಕೊಳ್ಳದವನು ಸನ್ಮಾರ್ಗದಿಂದ ತಪ್ಪಿಸುವನು"** (ಜ್ಞಾನೋ. 10:17). **"ನನ್ನ ಆಲೋಚನೆಯನ್ನು ಕೇಳಲೊಲ್ಲದೆ ನನ್ನ ಗದರಿಕೆಯನ್ನೆಲ್ಲಾ ತಾತ್ಸಾರ ಮಾಡಿದರು. ಆದದರಿಂದ ಅವರು ತಮ್ಮ ನಡತೆಯ ಫಲವನ್ನು ಅನುಭವಿಸಿ ಸ್ವಂತ ಕುಯುಕ್ತಿಗಳನ್ನೇ ಹೊಟ್ಟೆತುಂಬಾ ಉಣ್ಣಬೇಕಾಗುವದು"** (ಜ್ಞಾನೋ. 1:30– 32). **"ನನ್ನ ಮಾತಿಗೆ ಕಿವಿಗೊಡುವವನಾದರೋ ಸ್ವಸ್ಥವಾಗಿರುತ್ತಾ ಯಾವ ಕೇಡಿಗೂ ಭಯಪಡದೆ ಸುರಕ್ಷಿತವಾಗಿರುವನು"** (ಜ್ಞಾನೋ. 1:33). ಗಿಡ ಬೆಳೆಯಬೇಕಾದರೆ ಬರೀ ಗೊಬ್ಬರ ಮಾತ್ರವಲ್ಲ ನೀರು ಕೂಡಾ ಅಗತ್ಯವಿದೆ. ಅದೇ ರೀತಿ ನಾವೂ ಆತ್ಮೀಕವಾಗಿ ಬೆಳೆಯಬೇಕಾದರೆ ಜೀವವುಳ್ಳ ನೀರು ಅಂದರೆ ಪವಿತ್ರಾತ್ಮನ ಅಭಿಷೇಕ ಅಗತ್ಯವಾಗಿಯೂ ಬೇಕು. ಆದರೆ ಅದಕ್ಕಾಗಿ ನಾವು ದಾಹವುಳ್ಳವರಾಗಿರಬೇಕು (ಯೋಹಾ. 7:37). ದಾಹವುಳ್ಳವನು ತನ್ನ ಬಳಿ ಬರಲಿ ಎಂದು ದೇವರು ಹೇಳಿದ್ದಾನೆ (ಯೆಶಾ. 55:1–2). 2 ಕೊರಿ. 3:6 ರಲ್ಲಿ ಬರೆದಿದೆ. **"ದೇವರಾತ್ಮ**

ಬಡವರಿಗೆ ದಾನಮಾಡುವವನು ಕೊರತೆಪಡನು

(ಜ್ಞಾನೋ. 28:27).

**ಸಂಬಂಧವಾದದ್ದು ಜೀವವನ್ನುಂಟು ಮಾಡುತ್ತದೆ"** ಆತ್ಮನ ಬಲವಿಲ್ಲದ ಎಲ್ಲಾ ಕಾರ್ಯಗಳು ಸತ್ತದ್ದಾಗಿರುವುದು. **ಪವಿತ್ರಾತ್ಮನ ಮೇಲೆ ಮನಸ್ಸಿಡುವದು ಜೀವವೂ ಮನಶಾಂತಿಯೂ ಆಗಿದೆ** (ರೋಮ. 8:6). ದೇವರಾತ್ಮನಿಂದ ನಡೆಸಲ್ಪಡುವವರೇ ದೇವರ ಮಕ್ಕಳೆಂದು ದೇವರ ವಾಕ್ಯ ತಿಳಿಸುತ್ತದೆ (ರೋಮ. 8:14). ಒಬ್ಬ ಸೇವಕರು ತನ್ನ ಪ್ರಸಂಗದಲ್ಲಿ ಒಂದು ಘಟನೆಯನ್ನು ಹೇಳುತ್ತಿದ್ದರು, ಒಬ್ಬ ಜನಪ್ರಿಯ ವೈದ್ಯರ ಬಳಿ ಪೆಟ್ರೋಲಿನಿಂದ ಓಡಿಸುವ ಒಂದು ಬೆಲೆ ಬಾಳುವ ಕಾರಿತ್ತು. ಅವರು ಅದನ್ನು ತನ್ನ ವೃತ್ತಿ ಜೀವಿತದಲ್ಲಿ ದೂರದವರೆಗೂ ಹೋಗಿ ರೋಗಿಗಳಿಗೆ ಚಿಕಿತ್ಸೆ ಕೊಡುತ್ತಿದ್ದರು. ಒಂದು ದಿನ ಮುಂಜಾನೆ ಮೊಬ್ಬಿರುವಾಗಲೇ ಅವರಿಗೆ ತುರ್ತಾಗಿ ಪಕ್ಕದ ಊರಿನಿಂದ ಫೋನ್ ಕಾಲ್ ಅರ್ಜೆಂಟಾಗಿ ಬರಲು ಅವರು ಮುಂಜಾನೆ ಅವಸರದಲ್ಲಿ ಹೊರಡುವಾಗ ಕಾರಿನಲ್ಲಿ ಪೆಟ್ರೋಲ್ ಕಡಿಮೆ ಕಾಣಿಸುವುದರಿಂದ ಅವರು ಪಕ್ಕದಲ್ಲೇ ಇದ್ದ ಪೆಟ್ರೋಲ್ ಬಂಕ್‌ಗೆ ಹೋಗಿ ಕಾರಿಗೆ ಇಂಧನ ತುಂಬಿಸಿ ವೇಗದಲ್ಲಿ ಹೊರಟರು. ಗಾಡಿ ಸುಮಾರು 1 ಕಿ.ಮೀ. ದೂರಕ್ಕೆ ಹೋಗುವಷ್ಟರಲ್ಲಿ ನಿಂತು ಹೋಯಿತು. ಅವರು ಇಳಿದು ಗಾಡಿ ಭಾಗಗಳನ್ನು ಒಂದೊಂದೇ ಪರೀಕ್ಷಿಸುವಾಗ ಎಲ್ಲವೂ ಸರಿಯಾಗಿತು. ಲೈಟ್, ಬ್ಯಾಟರಿ, ಹಾರನ್ ಇತ್ಯಾದಿ ಚೆನ್ನಾಗಿಯೇ ಇದೆ. ಆದರೂ ಕಾರು ಮುಂದಕ್ಕೆ ಚಲಿಸುತ್ತಾ ಇಲ್ಲ. ಪ್ರಯತ್ನ ಪಟ್ಟು ಕೊನೆಗೆ ಒಬ್ಬ ಮೆಕಾನಿಕ್‌ನ್ನು ಕರೆತರಲು ಆತನು ಬಂದು ಎಲ್ಲವನ್ನು ಪರೀಕ್ಷಿಸಿ ಸರಿಯಾಗಿದೆ. ಆ ನಂತರ ಪೆಟ್ರೋಲ್ ಪೈಪನ್ನು ಬಿಚ್ಚಲು ಅಲ್ಲಿ ಪೆಟ್ರೋಲ್ ಬದಲಾಗಿ ಡಿಸೇಲ್ ವಾಸನೆ ಬರುತ್ತಿದ್ದು ಟ್ಯಾಂಕಿ ಪರೀಕ್ಷಿಸಿ ನೋಡುವಾಗ ಅಲ್ಲೇ ತೊಂದರೆ. ಪೆಟ್ರೋಲಿನಲ್ಲಿ ಓಡುವ ಕಾರಿಗೆ ಅವಸರದಲ್ಲಿ ಡಿಸೇಲ್ ತುಂಬಿದರೆ ಗಾಡಿ ಹೇಗೆ ತಾನೇ ಓಡಬಲ್ಲದು?

ಪ್ರಿಯ ದೇವ ಮಗುವೆ, ದೇವರಾತ್ಮನಿಂದ ನಡೆಸಲ್ಪಡುವ ನಿನ್ನ ಜೀವಿತವು ದುರಾತ್ಮನಿಂದ ನಡೆಸಲ್ಪಡುವಿಯಾದರೆ ಅದು ಹೇಗೆ ತಾನೇ ಆತ್ಮೀಕ ಬೆಳವಣಿಗೆ ಬರಬಹುದು? ದೇವರಾತ್ಮನಿಂದ ನಡಿಸಲ್ಪಡುವ ಆತ್ಮೀಕ ಜೀವಿತ ನಿಂತು ಹೋಗುವುದಿಲ್ಲ. ಆದರೆ ಲೋಕದಲ್ಲಿರುವವನ ಆತ್ಮನಿಂದ ನಡೆಸಲ್ಪಡುವ ಜೀವಿತ ನಿಂತು ಬಿಡುವುದು. ಸತ್ಯವೇದ ಹೇಳುತ್ತದೆ, **"ದೇವರಾತ್ಮನ ಮೂಲಕ ನಡಿಸುವ ಸೇವೆಯು ಎಷ್ಟೋ ಪ್ರಭಾವವುಳ್ಳದ್ದಾಗಿರುತ್ತದೆ** (2 ಕೊರಿ. 3:18). **"ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಬೇಕು"** (ಅ.ಕೃ. 1:8). ಪ್ರಿಯನೇ, ಗಿಡಗಳು ಬೆಳೆಯಬೇಕಾದರೆ ಸೂರ್ಯನ ಶಾಖ (ಕಿರಣ) ಅಗತ್ಯವಾಗಿ ಬೇಕು. ಆಗಲೇ ಅದು ವೇಗವಾಗಿ ಬೆಳೆಯುವುದು. ಅದೇ ರೀತಿ ಪವಿತ್ರಾತ್ಮನು ನಿನ್ನ ಜೀವಿತದಲ್ಲಿ ಇರುವುದಾದರೆ ನೀನು ಆತ್ಮೀಕವಾಗಿ ಬೆಳೆಯಲು ಸಾಧ್ಯ. **"ಪವಿತ್ರಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ"** (ಎಫೆ. 2:22). ಯೇಸು ತನ್ನ ಶಿಷ್ಯರಿಗೆ ಹೇಳುತ್ತಾರೆ, 'ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ' (ಲೂಕ. 24:49). ಪ್ರಿಯ ದೇವ ಮಗುವೆ, ಇದನ್ನು ಓದಿದ ನೀನೂ ಸಹ ಆತ್ಮೀಕವಾಗಿ ಬೆಳೆದು ದೇವರಿಗಾಗಿ ಫಲ ಕೊಡುವ ಮರವಾಗಿರು. **"ಯೋಸೇಫನು ಬಹು ಫಲವನ್ನು ಬಿಡುವ ವೃಕ್ಷಕ್ಕೆ ಸಮಾನನಾಗಿದ್ದಾನೆ"** (ಆದಿ. 49:22).

ಮುಂದುವರಿಯುವದು......

ಕರ್ತನಲ್ಲಿ ನಿಮ್ಮ ಪ್ರೀತಿಯ

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್.

## ಆಶ್ರಮದ ಅವಶ್ಯಕತೆಗಳು

1. **30 ಟೇಬಲ್**
2. **60 ಬೆಂಚ್**
3. **ಟೆಂಪೋ ಟ್ರಾವಲ್ಸ್**
4. **ಅಕ್ಕಿ, ಸಕ್ಕರೆ, ದವಸಧಾನ್ಯ**

ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ

**9902334941, 08202002781, 09964070654.**

ಅವನು ನನಗೆ ಮೊರೆಯಿಡುವಾಗ ಸದುತ್ತರವನ್ನು ದಯಪಾಲಿಸುವೆನು; ಇಕ್ಕಟ್ಟಿನಲ್ಲಿ ಹತ್ತಿರವಿದ್ದು ಅವನನ್ನು ತಪ್ಪಿಸಿ ಘನಪಡಿಸುವೆನು (ಕೀರ್ತ. 91:15).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

## ವಿಶೇಷ ಸೂಚನೆ :

ಜುಲೈ 2013 17 ರಿಂದ 20ರವರೆಗೆ 4 ದಿನದ ಯೌವನಸ್ಥರಿಗಾಗಿ (ಶಕ್ತಿಯ ಕೂಟಗಳು) ಯೂತ್ ಪವರ್ ಕಾನ್ಫರೆನ್ಸ್ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಸಲ್ಪಡುವದು ಈ ಕೂಟದಲ್ಲಿ ಯೇಶು ಮೇರಾ ಬಾಹಿ ಸಿ.ಡಿ.ಯ ಹಾಡನ್ನು ಹಾಡಿದ ಪಾ॥ ಅಜಯ್ ಚೋವಾ, ಪಾ॥ ಜಾನ್‌ಸನ್ ವರ್ಗಿಸ್ (ಬೇತೇಲ್ ಎ.ಜಿ. ಚರ್ಚ್ ಬೆಂಗಳೂರು) ಹೆಬಿಕ್ ಸೈಮನ್ (ಕೇರಳ) ಪಾ॥ ನೆಹೆಮೀಯ (ಚನೈ) ಸಹೋ॥ ಕೃಪಾ (ಚನೈ) ಈ ಎಲ್ಲಾ ದೇವ ಸೇವಕರುಗಳು ಬಂದು ಸೇವೆಮಾಡಲಿದ್ದಾರೆ. ಈ ಕೂಟದಲ್ಲಿ ಭಾಗವಹಿಸಲಿಚ್ಛಿಸುವವರು ನಿಮ್ಮ ನೊಂದಾವಣೆಯನ್ನು ಶೀಘ್ರವಾಗಿ ಮಾಡಿಕೊಳ್ಳಿ.

## ಪ್ರಾರ್ಥನಾ ಮನವಿಗಳು

- ನಮ್ಮ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರವು ಒಳ್ಳೇ ರೀತಿಯಲ್ಲಿ ಆಡಳಿತ ನಡೆಸಲು ದೇವರು ಜ್ಞಾನವನ್ನು ಕೊಡುವಂತೆ ಪ್ರಾರ್ಥಿಸಿರಿ.
- ಎಲ್ಲಾ ಬರಗಾಲಗಳು, ನೀರಿನ ಕೊರತೆ, ವಿದ್ಯುತ್‌ಚ್ಛಕ್ತಿಯ ಕೊರತೆ, ಆಹಾರದ ಕೊರತೆಗಳು ನೀಗುವಂತೆ ಸಮೃದ್ಧಿಯಾದ ದೇಶವಾಗಿ ಮಾರ್ಪಡುವಂತೆ ಪ್ರಾರ್ಥಿಸಿರಿ.
- ದೇವರ ಸ್ವರ ಮಾಸ ಪತ್ರಿಕೆಯು ಇನ್ನು ಹೆಚ್ಚು ಮುದ್ರಣವಾಗುವಂತೆ ಈ ಸೇವೆಯು ವಿಸ್ತಾರವಾಗುವಂತೆ ಪ್ರಾರ್ಥಿಸಿರಿ.

ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು [ಏರುವರು]; ಓಡಿ ದಣಿಯರು, ನಡೆದು ಬಳಲರು (ಯೆಶಾ. 40:31).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ನಮ್ಮ ಸಭೆಯ ವಿಶ್ವಾಸಿ ಕುಟುಂಬಗಳು ಅವರು ಸೇವಿಸುವ ಅಕ್ಕಿ, ದವಸ ಧಾನ್ಯಗಳಲ್ಲಿ 10 ರಲ್ಲಿ 1 ಭಾಗವನ್ನು ತಂದು ಕೊಟ್ಟರು. ಅವರ ಒಳ್ಳೆ ಒಳ್ಳೇ ಬಟ್ಟೆಗಳನ್ನು ಅನಾಥರಿಗೆ ತೊಡಿಸುವುದಕ್ಕಾಗಿ ತಂದುಕೊಟ್ಟರು. ಅವರ ಕೈಯಿಂದ ಆಗುವ ಹಣದ ಸಹಾಯವನ್ನು ಮಾಡಿದರು. ನಾವು ಈ ಸೇವೆಯನ್ನು ಬೇರೆಯವರಿಂದ ತೆಗೆದುಕೊಂಡು ಮಾಡಲಿಲ್ಲ. ನಾನು ನನ್ನ ಹೆಂಡತಿ, ಸಭೆಯ ವಿಶ್ವಾಸಿಗಳವರು ನಮ್ಮಲ್ಲಿರುವಂತದ್ದನ್ನು ತ್ಯಾಗ ಪೂರ್ವಕವಾಗಿ ಈ ಸೇವೆಗೆ ಹಾಕಿ ಈ ಸೇವೆಯನ್ನು ಮಾಡಿದೆವು. ಯೋಬ. 8:7 ಹೇಳುತ್ತದೆ, **ಆರಂಭವು ಅಲ್ಪವಾದರೂ ಅಂತ್ಯವೂ ದೊಡ್ಡದಾಗಿರುವುದು**. ಇಂದು ದೇವರು ನಮ್ಮ ತ್ಯಾಗ ಪೂರ್ವವಾದ ಸೇವೆಯನ್ನು ನೋಡಿ ಮೇಲ್ಪಟ್ಟು ಆಶೀರ್ವಾದಿಸಿ ಅಭಿವೃದ್ಧಿಪಡಿಸಿದ್ದಾನೆ. ಅಂದು ನನ್ನ ಮಾರುತಿ ಓಮಿಯನ್ನು ಸೇವೆಗಾಗಿ ಸಮರ್ಪಿಸಿದ್ದರಿಂದ ಕರ್ತನು ಅದಕ್ಕಿಂತ ದೊಡ್ಡದಾದ ವಾಹನವನ್ನು ಉಚಿತವಾಗಿ ಒದಗಿಸಿದ್ದಾನೆ. ಆದಕಾರಣ ಪ್ರಿಯ ದೇವ ಸೇವಕರೇ, ಸುವಾರ್ತಿಕರೇ, ನೀವು ಮೊದಲು ಅನಾಥ ಸೇವೆಗಳಿಗೆ ಕೊಡಲು ಮುಂದಾಗಿರಿ ಮತ್ತು ನಿಮ್ಮ ಸಭಿಕರಿಗೆ ಕೊಡಲು ಕಲಿಸಿರಿ. ಇದರಿಂದ ನಿಮ್ಮ ಕುಟುಂಬ, ಸಭೆಗಳನ್ನು ಆಶೀರ್ವಾದ ಮಾಡುತ್ತಾನೆ. ಕೇವಲ ನಾವು ಉಪವಾಸ ಮಾಡಿ ಪ್ರಾರ್ಥಿಸುವುದು ಮಾತ್ರವಲ್ಲ, ಉಪವಾಸ ಮಾಡಿ ಊಟ ಮಾಡದಿರುವಂತಹ ಹಣವನ್ನು ಅನಾಥರ ಸೇವೆಗಳಿಗೆ ಕೊಟ್ಟು ಆಶೀರ್ವಾದ ಹೊಂದಿಕೊಳ್ಳೋಣ. ಜಜ್ಜಲ್ಪಟ್ಟ ಅನೇಕರನ್ನು ಕ್ರಿಯೆಗಳ ಮೂಲಕ ಬಿಡಿಸೋಣ. ಅವರ ಜೀವಿತದಲ್ಲಿ ನಿರೀಕ್ಷೆಯನ್ನು ತುಂಬಿಸೋಣ.

1) **ನೋಗಗಳನ್ನೆಲ್ಲಾ ಮುರಿಯುವುದು** (ಯೆಶಾ. 58:6). ನೋಗ ಎಂದರೆ ಮೇಲಿನ ವಾಕ್ಯಗಳಲ್ಲಿ ಕಲಿತು ಕೊಂಡಿದ್ದೇವೆ. ದಾಸತ್ವ, ಬಂಧನ, ನಿಯಂತ್ರಣ, ಹೊರೆ ಇವೆಲ್ಲಾ ಅರ್ಥ ಬರುತ್ತದೆ. ನೋಗಗಳನ್ನು ಮುರಿಯುವುದು ಎಂದರೆ ಯಾವ ಪಾಪವು ನಮ್ಮನ್ನು ನಿಯಂತ್ರಿಸುತ್ತಾ ಇದೆಯೋ ಅದರಿಂದ ಬಿಡಿಸಿಕೊಳ್ಳುವಂತದಾಗಿದೆ. ಯಾವಾಗ ಪಾಪದ ನೊಗದ ಅಡಿಯಲ್ಲಿರುತ್ತೇವೆ ಆಗ ಆತ್ಮೀಕ ವಾಗಿ ಬೆಳೆಯಲು ಸಾಧ್ಯವಾಗಲ್ಲ. ಆತ್ಮೀಕ ಬೆಳವಣಿಗೆ ಕುಂಠಿತವಾಗುತ್ತದೆ ನಾವು ಬಂಧನದಲ್ಲಿರುತ್ತೇವೆ. ಇತರರನ್ನು ಬಿಡಿಸಲು ನಮ್ಮಿಂದ ಸಾಧ್ಯವಿಲ್ಲ. ಮಾರ್ಕ. 9:29 ರಲ್ಲಿ ಯೇಸು ಹೇಳಿದನು. **ಈ ಜಾತಿಯು ದೇವರ ಪ್ರಾರ್ಥನೆಯಿಂದಲೇ ಹೊರತು ಬೇರೆ ಯಾತರಿಂದಲೂ ಬಿಟ್ಟು ಹೋಗುವದಿಲ್ಲವೆಂದು ಅವರಿಗೆ ಹೇಳಿದನು**. ನಾವು ಒಂದು ನೋಗದ ಅಡಿಯಲ್ಲಿ ಇದ್ದು ಉಪವಾಸ ಪ್ರಾರ್ಥನೆ ಮಾಡುವುದಕ್ಕಿಂತ ನೋಗದ ಬಿಡುಗಡೆಗಾಗಿ ಉಪವಾಸ ಪ್ರಾರ್ಥನೆ ಮಾಡುವುದು ಉತ್ತಮ. ಒಬ್ಬ ಸುವಾರ್ತಿಕ ಸಹೋದರನ ಬಗ್ಗೆ ಚೆನ್ನಾಗಿ ಗೊತ್ತು. ಆತನು 40 ದಿವಸ, 21 ದಿವಸ ಹೀಗೆ ಅನೇಕ ಸಲ ಉಪವಾಸ ಪ್ರಾರ್ಥನೆ ಮಾಡುತ್ತಿದ್ದನು. ಆದರೆ ಸೇವೆಯಲ್ಲಿ ಯಾವುದೇ ಅಭಿವೃದ್ಧಿಯಿಲ್ಲದೆ ಒಂದು ದಿವಸ ನನ್ನನ್ನು ಸಂಧಿಸಲು ಕರ್ತನು ಸಹಾಯಮಾಡಿದನು. ನನ್ನಲ್ಲಿ ಆಲೋಚನೆ ಕೇಳಿದಾಗ ಅವನಲ್ಲಿದ್ದ ಒಂದು ರಹಸ್ಯ ಪಾಪವು ಪ್ರಕಟವಾಯಿತು. ನಾನು ಆತನಿಗೆ ಕೇಳಿಕೊಂಡು ಪಾಪಕ್ಕೆ ಪಶ್ಚಾತ್ತಾಪಪಟ್ಟು ದೇವರಿಗೆ ಕ್ಷಮೆ ಕೇಳಿಕೋ ಖಂಡಿತ ದೇವರು ಬಿಡುಗಡೆ ಮಾಡಲು ಶಕ್ತನಾಗಿದ್ದಾನೆ. ಆತನು ತನ್ನ ಪಾಪಕ್ಕೆ ಪಶ್ಚಾತ್ತಾಪಪಟ್ಟು ಕರ್ತನ ಬಳಿ ಕ್ಷಮಾಪಣೆಯನ್ನು ಕೇಳಿಕೊಂಡು 3 ದಿವಸ ರಾತ್ರಿ ಹಗಲು ಉಪವಾಸ ಪ್ರಾರ್ಥನೆಯನ್ನು ಮಾಡಿದನು. ಕರ್ತನು ಅದ್ಭುತವಾಗಿ ಆ ಪಾಪದ ದಾಸತ್ವದಿಂದ ಬಿಡುಗಡೆ ಮಾಡಿದನು. ಕರ್ತನು ಆತನನ್ನು ಈ ದಿನಗಳಲ್ಲಿ ಅನೇಕ ಪ್ರಾಂತ್ಯಗಳಲ್ಲಿ ಶಕ್ತವಾಗಿ ಉಪಯೋಗಿಸುತ್ತಿದ್ದಾನೆ. ಆದಕಾರಣ ನೋಗಗಳನ್ನು ಮುರಿದ ನಂತರ ಮಾಡುವಂತಹ ಹಾಗೂ ನೋಗಗಳನ್ನು ಮುರಿಯಲು ಮಾಡುವಂತಹ ಉಪವಾಸ ಪ್ರಾರ್ಥನೆ ನಿಜವಾದ ಉಪವಾಸ ಪ್ರಾರ್ಥನೆಯಾಗಿದೆ.

2) **ಹಸಿದವರಿಗೆ ಅನ್ನವನ್ನು ಹಂಚುವದು** (ಯೆಶಾ. 58:7):– ಮೇಲಿನ ಕೆಲವು ವಾಕ್ಯಗಳಲ್ಲಿ ಅನಾಥರಿಗೂ, ವಿಧವೆಯರಿಗೂ, ಬಡವರಿಗೂ, ದಿಕ್ಕಿಲ್ಲದವರಿಗೂ ಕೊಡುವ ಬಗ್ಗೆ ತಿಳಿದುಕೊಂಡಿದ್ದೇವೆ. ಅನೇಕರು ಉಪವಾಸ ಪ್ರಾರ್ಥನೆ ಮಾಡುತ್ತಾರೆ. ಆದರೆ ಹಸಿದಂತಹ ಅನೇಕರು ಸುತ್ತ ಮುತ್ತಲ್ಲಿದ್ದರೂ ಅವರಿಗೆ ಒಂದು ತುತ್ತು

ಯೆಹೋವನ ಭಯಭಕ್ತಿಯುಳ್ಳವರ ಸುತ್ತಲು ಆತನ ದೂತನು ದಂಡಿಳಸಿ ಕಾವಲಾಗಿದ್ದು ಕಾಪಾಡುತ್ತಾನೆ (ಕೀರ್ತ. 34:7).

ಅನ್ನವನ್ನು ಕೊಡುವುದಿಲ್ಲ. ಅ.ಕೃ. 10:1–5 ವಾಕ್ಯದಲ್ಲಿ ಕುಟುಂಬವಾಗಿ ದೇವರಿಗೆ ಭಯಪಟ್ಟು ಪ್ರಾರ್ಥಿಸುವಂತಹ ಕೊರ್ನೆಲ್ಯನನ್ನು ನೋಡುತ್ತೇವೆ. ಆತನು ಕೇವಲ ಪ್ರಾರ್ಥಿಸಿ ದರ್ಶನಗಳನ್ನು ಕಾಣುವುದು ಮಾತ್ರವಲ್ಲದೆ ದಾನ ಧರ್ಮಗಳನ್ನು ಮಾಡುತ್ತಿದ್ದನೆಂದು ತಿಳಿದುಕೊಳ್ಳಬಹುದು. ಇಂದು ನಮ್ಮ ಉಪವಾಸ ಪ್ರಾರ್ಥನೆಗೆ ನಿಜವಾದ ಅರ್ಥ ಬರುವುದಾದರೆ ನಾವು ಉಪವಾಸ ಮಾಡಿ ತಿನ್ನದೆ ಉಳಿಸುವಂತಹ ಆಹಾರವನ್ನು ಹಸಿದಂತಹ ಅನಾಥರಿಗೂ, ನಿರ್ಗತಿಕರಿಗೂ, ಬಡವರಿಗೂ ಕೊಡಲು ಸಿದ್ಧವಾಗಿರಬೇಕು. ಆಗ ನಮ್ಮ ಉಪವಾಸ ಪ್ರಾರ್ಥನೆಯನ್ನು ಕರ್ತನು ಮೆಚ್ಚುತ್ತಾನೆ.

**3) ಅಲೆಯುತ್ತಿರುವ ಬಡವರನ್ನು ಮನೆಗೆ ಬರಮಾಡಿಕೊಳ್ಳುವುದು** (ಯೆಶಾ. 58:7):– ಇಂದು ಅನೇಕರು ಉಪವಾಸ ಪ್ರಾರ್ಥನೆ ಮಾಡುತ್ತಾರೆ. ಬಡವರ ಜ್ಞಾಪಕವನ್ನು ಮಾತ್ರ ಮಾಡುತ್ತಿಲ್ಲ. ಗಲಾ. 2:10 ಆದರೆ ನೀವು ನಮ್ಮಲ್ಲಿರುವ ಬಡವರನ್ನು ಜ್ಞಾಪಕ ಮಾಡಿಕೊಳ್ಳಬೇಕೆಂಬ ಒಂದೇ ಸಂಗತಿಯನ್ನು ಬೇಡಿಕೊಂಡರು. ಇದನ್ನು ಮಾಡುವುದರಲ್ಲಿ ನಾನು ಆಸ್ತಕನಾಗಿದ್ದೆನು. ಆದುದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ. ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತ ನಂಬಿಕೆಯುಳ್ಳವರಿಗೆ ಮಾಡೋಣ (ಗಲಾ. 6:10). ನೀವು ದೇವ ಜನರಿಗೆ ಉಪಚಾರ ಮಾಡಿದಿರಿ, ಇನ್ನೂ ಮಾಡುತ್ತಾ ಇದ್ದೀರಿ. ಈ ಕೆಲಸವನ್ನೂ ಇದರಲ್ಲಿ ನೀವು ದೇವರ ನಾಮದ ವಿಷಯವಾಗಿ ತೋರಿಸಿದ ಪ್ರೀತಿಯನ್ನೂ ಆತನು ಮರೆಯುವದಕ್ಕೆ ಅನ್ಯಾಯಸ್ಥನಲ್ಲ. ನಾವು ಬಡವರಿಗಾಗಿ ಮಾಡುವ ಪ್ರತಿಯೊಂದು ಸೇವೆಯು ಕರ್ತನಿಗೆ ಮೆಚ್ಚಿಗೆಯಾದದ್ದು. **"ಆತನು ತನ್ನನ್ನು ಊಟಕ್ಕೆ ಕರೆದವನಿಗೆ ಸಹ ಒಂದು ಮಾತು ಹೇಳಿದನು; ಅದೇನಂದರೆ, ನೀನು ಮಧ್ಯಾಹ್ನದ ಊಟಕ್ಕೆ ಅಥವಾ ಸಾಯಂಕಾಲದ ಊಟಕ್ಕೆ ನಿನ್ನ ಸ್ನೇಹಿತರನ್ನಾಗಲಿ ನಿನ್ನ ಅಣ್ಣ ತಮ್ಮಂದಿರನ್ನಾಗಲಿ ನಿನ್ನ ಬಂಧುಬಾಂಧವರನ್ನಾಗಲಿ, ಐಶ್ವರ್ಯವಂತರಾದ ನೆರೆಯವರನ್ನಾಗಲಿ ಕರೆಯಬೇಡ. ಒಂದು ವೇಳೆ ಅವರು ಸಹ ಪ್ರತಿಯಾಗಿ ನಿನ್ನನ್ನು ಕರೆದಾರು, ಮತ್ತು ನಿನಗೆ ಮುಯ್ಯಿಗೆಮುಯ್ಯಾಗುವದು. ಆದರೆ ನೀನು ಔತಣ ಮಾಡಿಸುವಾಗ ಬಡವರು ಊನವಾದವರು ಕುಂಟರು ಕುರುಡರು ಇಂಥವರನ್ನು ಕರೆ; ಅವರು ನಿನಗೆ ಮುಯ್ಯಿಗೆಮುಯ್ಯಿ ಮಾಡುವದಕ್ಕೆ ಏನೂ ಇಲ್ಲದವರಾಗಿದ್ದರೂ ನೀತಿವಂತರು ಜೀವಿತರಾಗಿ ಎದ್ದು ಬರುವಲ್ಲಿ ನಿನಗೆ ಮುಯ್ಯಿಗೆಮುಯ್ಯಾಗುವದರಿಂದ ನೀನು ಧನ್ಯನಾಗುವಿ ಅಂದನು"** (ಲೂಕ. 14:12–14).

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

## ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

ಯೆಹೋವನು ನೀತಿವಂತರ ಕೂಗನ್ನು ಕೇಳಿ ಎಲ್ಲಾ ಕಷ್ಟಗಳಿಂದ ಅವರನ್ನು ಬಿಡಿಸುತ್ತಾನೆ (ಕೀರ್ತ. 34:17).

# ಸ್ಥಳೀಯ ಮತ್ತು ವಿದೇಶ ಸುದ್ಧಿ

* ಚೀನಿ ಅತಿಕ್ರಮಣ ಸ್ಥಳೀಯ ಸಮಸ್ಯೆ ! ಚೀನ ಅತಿಕ್ರಮಣ ಕುರಿತ ತನ್ನ ಮೌನವನ್ನು ಮುರಿದಿರುವ ಪ್ರಧಾನಿ ಮನಮೋಹನ್ ಸಿಂಗ್, ಅದನ್ನು ಒಂದು ಸ್ಥಳಕ್ಕೆ ಸೀಮಿತಗೊಂಡಿರುವ ಸಮಸ್ಯೆ ಎಂದು ಮಹತ್ವ ನೀಡದಿರಲು ಯತ್ನಿಸಿದ್ದಾರಲ್ಲದೆ ಸಮಸ್ಯೆಯನ್ನು ಬಗೆಹರಿಸಬಹುದಾಗಿದೆ ಎಂದು ವಿಶ್ವಾಸವ್ಯಕ್ತಪಡಿಸಿದ್ದಾರೆ.
* 2014ರ ಅಂತ್ಯಕ್ಕೆ ಭಾರತದ ಜನಸಂಖ್ಯೆಯ ಸುಮಾರು ಅರ್ಧದಷ್ಟು ಜನರಿಗೆ ಆಧಾರ್ ಕಾರ್ಡ್‌ನ್ನು ವಿತರಿಸಲಾಗುವುದು. ಪುಸಕ್ತ ವರ್ಷದಲ್ಲಿ ದೇಶದ ಜನಸಂಖ್ಯೆಯ ಮೂರನೇ ಒಂದರಷ್ಟು ಮಂದಿಗೆ ಆಧಾರ್ ಕಾರ್ಡ್ ವಿತರಣೆಯಾಗಲಿದೆ ಎಂದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರಿ ಅಧ್ಯಕ್ಷ ನಂದನ್ ನೀಲೇಕನೀ ತಿಳಿಸಿದ್ದಾರೆ.
* ಪತ್ರಿ ತಿಂಗಳು ಬೆಲೆ ಪರಿಷ್ಕರಿಸುವ ನಿಯಮದಂತೆ ತೈಲ ಕಂಪನಿಗಳು ಪೆಟ್ರೋಲ್ ಬೆಲೆಯಲ್ಲಿ ಪ್ರತಿ ಲೀಟರ್‌ಗೆ 2.50ರೂ. ಇಳಿಕೆ ಮಾಡುವ ಸಾಧ್ಯತೆ ಇದೆ. ಅಂತಾರಾಷ್ಟ್ರೀಯ ಕಚ್ಚಾ ತೈಲ ಬೆಲೆ ಇಳಿಕೆಯಾದ ಕಾರಣ ಪೆಟ್ರೋಲ್ ಹೊಸ ಪರಿಷ್ಕೃತ ದರ ಏಪ್ರಿಲ್ ಅಂತ್ಯದ ವೇಳೆಗೆ ಜಾರಿಗೆ ಬರುವ ಸಂಭವವಿದೆ.
* ಮಧ್ಯಾಹ್ನದೂಟ ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ವಿತರಿಸುತ್ತಿರುವ ಆಹಾರದ ಗುಣಮಟ್ಟದ ಬಗ್ಗೆ ಅನೇಕ ದೂರುಗಳು ಬರುತ್ತಿರುವುದರಿಂದ ಸಂಸದೀಯ ಮಂಡಳಿಯೊಂದು ಆಹಾರದ ಪೊಟ್ಟಣಗಳನ್ನು ವಿತರಿಸಲು ಸಲಹೆ ಮಾಡಿದೆ.
* ಸ್ಪೇಯ್ನ್‌ನ ರಫೆಲ್ ನಡಾಲ್ ತನ್ನದೇ ದೇಶದ ನಿಕೋಲಾಸ್ ಅಲ್ಮಾಗ್ರೊ ಅವರನ್ನು ನೇರ ಸೆಟ್‌ಗಳಿಂದ ಕೆಡಹಿ ತನ್ನ ದಾಖಲೆ ಸಂಖ್ಯೆಯ ಬಾರ್ಸಲೋನ್ ಪ್ರಶಸ್ತಿಯನ್ನು ಎಂಟಕ್ಕೆ ಏರಿಸಿದರು.
* ಸೌದಿ ಅರೇಬಿಯಾದಲ್ಲಿ ಅವಧಿ ಮೀರಿ ತಂಗಿರುವ ಭಾರತೀಯ ಕಾರ್ಮಿಕರು ಮತ್ತು ಅಲ್ಲಿನ ಹೊಸ ಕಾರ್ಮಿಕ ನೀತಿಗೆ ಸಂಬಂಧಿಸಿದ ವಿಚಾರಗಳ ಸಹಿತ ಭಾರತೀಯ ಸಮುದಾಯ ಎದುರಿಸುತ್ತಿರುವ ಎಲ್ಲ ಸಮಸ್ಯೆಗಳನ್ನು ಪರಿಶೀಲಿಸಲು ಜಂಟಿ ಕಾರ್ಯತಂಡವೊಂದನ್ನು ರಚಿಸಲು ಭಾರತ ಮತ್ತು ಸೌದಿ ಅರೇಬಿಯಾ ಸಮ್ಮತಿಸಿವೆ.
* ಶಾಲೆಯಲ್ಲಿ ವಿದ್ಯಾರ್ಥಿ ಕಲಿಕೆಯಲ್ಲಿ ಎಷ್ಟೇ ಹಿಂದಿರಲಿ, 8ನೇ ತರಗತಿವರೆಗೆ ಪಾಸು ಎಂಬುದು ಸದ್ಯದ ವ್ಯವಸ್ಥೆ. ಆದರೆ ಇದರಿಂದಾಗಿ ಭಾರತೀಯ ವಿದ್ಯಾರ್ಥಿಗಳಲ್ಲಿ ಗಣಿತ ಸಮಸ್ಯೆಗಳನ್ನು ಪರಿಹರಿಸುವ ಮತ್ತು ಓದುವ ಮಟ್ಟ ಕುಸಿಯುತ್ತಿರುವ ಹಿನ್ನಲೆಯಲ್ಲಿ 8ನೇ ತರಗತಿವರೆಗೆ ನಪಾಸೇ ಇಲ್ಲ ಎಂಬ ವ್ಯವಸ್ಥೆಯನ್ನು ಪುನರ್ ಪರಿಶೀಲಿಸಲು ಕೇಂದ್ರ ಸರಕಾರ ಮುಂದಾಗಿದೆ.
* ಜಮ್ಮು ಮತ್ತು ಕಾಶ್ಮೀರ ಸಹಿತ ಉತ್ತರ ಭಾರತದ ಹಲವೆಡೆ ಸಂಭವಿಸಿದ ಮಧ್ಯಮ ಗಾತ್ರದ ಭೂಕಂಪನದಲ್ಲಿ ಇಬ್ಬರು ಬಲಿಯಾಗಿ, 32 ವಿದ್ಯಾರ್ಥಿಗಳ ಸಹಿತ 69 ಮಂದಿ ಗಾಯಗೊಂಡರು ಮತ್ತು ಅನೇಕ ಕಟ್ಟಡಗಳು ಹಾನಿಗೀಡಾದವು.

**ಜಾಹಿರಾತು**

**ಗಾರೆ ಕೆಲಸಗಾರರು ಹಾಗೂ ಸೆಂಟ್ರಿಂಗ್ ಕೆಲಸಗಾರರು ಬೇಕಾಗಿದ್ದಾರೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ

**ದೂರವಾಣಿ ಸಂಖ್ಯೆ : 9902334941.**

ನನಗೆ ಶೌರ್ಯವೆಂಬ ನಡುಕಟ್ಟನ್ನು ಬಿಗಿಯುವವನೂ ನನ್ನ ಮಾರ್ಗವನ್ನು ಸರಾಗಮಾಡುವವನೂ ಆತನೇ (ಕೀರ್ತ. 18:32).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

# ಸ್ವಪಾಣ್ ಪಾರ್ಕಿ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಎಜಿಪ್ತಾಕ್ ಪಾವಲ್ಲ್ಯಾ ವ್ಯಾಪರಿಸ್ತಾನಿಂ ಜುಜೆಕ್ ಫಾರಾವ್ಯಾಚ್ಯಾ ರಾಕ್ಣ್ಯಾಚ್ಯಾ ಮುಖೆಲಿಕ್ ಗುಲಾಮ್ ಜಾವ್ನ್ ವಿಕ್ಲೊ. ಸರ್ವೆಸ್ಪರ್ ದೇವ್ ಜುಜೆ ಬರಾಬರ್ ಆಸಲ್ಲ್ಯಾನ್ ತಾಣೆಂ ಸರ್ವ್ ಕಾಮಾನಿಂ ಯಶಸ್ವಿ ಆನಿಂ ಶಾಬಾಸ್ಕಿ ಜೊಡ್ಲಿ. ಅಶೆಂ ಪೊತಿಫರಾನ್ ಜುಜೆಕ್ ಖಾಸ್ ತಶೆಂ ಜೆರಾಲ್ ಕಾರ್ಭಾರಿ ಜಾವ್ನ್ ನೆಮ್ಲೊ. ಜುಜೆ ಪುಡ್ಪುಡಿತ್ ಆನಿಂ ಸೊಬಿತ್ತ್ ಆಸಲ್ಲ್ಯಾನ್ ಪೊತಿಫರಾಚ್ಯಾ ಬಾಯ್ಲೆಚಿ ವಾಂಕ್ಡಿ ನದರ್ ಜುಜೆಚೇರ್ ಪಡ್ಲಿ. ತಿಣೆಂ ಆಶೆಲ್ಲೊ ಸುಖ್– ಸಾಂಗಾತ್ ದಿಂವ್ಕ್ ಜುಜೆನ್ ನೆಗಾರ್ ಕೆಲ್ಲ್ಯಾನ್ ತಾಚೆರ್ ಉಲ್ಟೊ ಫಿರ್ಯಾದ್ ಮಾಂಡುನ್ ತಿಣೆಂ ತಾಕಾ ಬಂದಿಖಾನ್ಯಾಂತ್ ಬಂದ್ ಕರೈಲೊ. ಸರ್ವೆಸ್ಪರ್ ದೇವ್ ಜುಜೆ ಬರಾಬರ್ ಆಸಲ್ಲ್ಯಾನ್ ಜುಜೆಚೆಂ ಬರೆಂ ನಡ್ತೆಂ ಪಳೇವ್ನ್ ಬಂದಿಖಾನಾಂತ್ಲ್ಯಾ ಮುಖೆಲಿನ್ ಅಖ್ಯಾ ಬಂದಿಖಾನೆಚಿ ಖಬಡ್ದಾರಿ ಜುಜೆ ಆದೀನ್ ಕೆಲಿ. ಹ್ಯಾ ವಗ್ತಾ ರಾಯಾನ್ ಎಕಾ ಬೊಟ್ಲೆರಾಕ್ ಆನಿಂ ಎಕಾ ಖರ್ನ್ದಾರಾಕ್ (ಘ್ರುಗೆ ಪಿಟಾಚೆಂ ಖಾಣಾ–ಪಕ್ವಾನಾ ಕರ್ತಾಲೊ) ತಾಂಚ್ಯಾ ಚುಕಿಕ್ ಲಾಗುನ್ ಬಂಧಡೆಂತ್ ಘಾಲ್ಲೆ. ಅಶೆಂ ಆಸ್ತಾಂ ತ್ಯಾ ದೋಗ್ ಕೈದಿಂಕ್ ಸ್ವಪ್ಣಾಂ ಪಡ್ಲಿಂ, ಆನಿಂ ಸ್ವಪ್ಣಾಂಚೊ ಅರ್ಥ್ ಮ್ಹಾಕಾ ಸಾಂಗ್ತಲೊ...." ಜುಚೆನ್ ಜಾಪ್ ದಿಲಿ.

ಜುಚೆನ್ ಬೊಟ್ಲೆರಾಕ್ ಆಪವ್ನ್ ಸಾಂಗ್ಲೆಂ **"ತುಕಾ ಬಂದಡೆಥಾವ್ನ್ ಸುಟ್ಕಾ ಮೆಳ್ತಲಿ ಆನಿಂ ಪರ್ತ್ಯಾನ್ ರಾಯಾ ಹುಜ್ರಿಂ ಕಾಮಾಕ್ ಲಾಗ್ತಲೊಯ್. ಅಶೆಂ ಸುಟ್ಕಾ ಲಾಬ್ತಚ್ ರಾಯಾಲಾಗಿಂ ಮ್ಹಜೆ ಸುಟ್ಕೆ ಬಾಬ್ತಿಂ ತುವೆಂ ಶಿಫಾರಸ್ ಕರುಂಕ್ ಜಾಯ್"** ಉಪ್ರಾಂತ್ ಖರ್ನ್ಗಾರಾಕ್ ಆಪವ್ನ್ ಸಾಂಗ್ಲೆಂ **"ತುಕಾ ತೀನ್ ದಿಸಾ ಉಪ್ರಾಂತ್ ತುಜ್ಯಾ ಕರ್ನೆಕ್ ತುಕಾ ಗಳ್ಫಾಸ್ ಶಿಕ್ಷಾ ದಿತೆಲೆ"** ಆನಿಂ ಅಶೆಂ ಜುಜೆನ್ ಸ್ವಪ್ಣಾಂ ಪಾರ್ಕಿಲ್ಲ್ಯಾ ಬರಿಂಚ್ ಘಡ್ಲೆಂ!

ಸುಟ್ಕಾ. ದೋನ್ ವರ್ಸಾಂ ಪಾಶಾರ್ ಜಾಲಿಂ ರಾಯಾಚೊ ಬೊಟ್ಲೆರ್ ಜುಜೆಕ್ ಸಂಪೂರ್ಣ್ ವಿಸರಲ್ಲೊ. ಅಶೆಂ ಆಸ್ತಾಂ ಎಜಿಪ್ತಾಚೊ ರಾಯ್ (ಫಾರಾವೊಕ್) ಸ್ವಪ್ಣಾಂ ಪಡ್ಲಿಂ ಆನಿಂ ತ್ಯಾ ಸ್ವಪ್ಣಾಂಚೊ ಮತ್ಲಬ್ ಜಾಣಾಂ ಜಾಂವ್ಚ್ಯಾಕ್ ತಾಣೆಂ ಜ್ಯೋತಿಶಿಂಕ್ ಆನಿಂ ಘಾಡಿಂಕ್ ಆಪಯ್ಲೆಂ. ಪುಣ್ ಫಾರಾವ್ಯಾಚ್ಯಾ ಸ್ವಪ್ಣಾಂಚೊ ಅರ್ಥ್ ವಿವರ್ಸುನ್ ಸಾಂಗುಂಕ್ ತಾಂಚ್ಯಾನ್ ಜಾಲೆಂ ನಾ. ತೆದ್ನಾ ಬೊಟ್ಲೆರಾಕ್ ಜುಜೆಚೊ ಉಗ್ಡಾಸ್ ಆಯ್ಲೊ ಆನಿಂ ತಾಣೆಂ ಜುಚೆವಿಶಿಂ ರಾಯಾಕಡೆಂ ಶಿಫಾರಾಸ್ ಕೆಲಿ. ತಕ್ಷಣ್ ರಾಯಾನ್ ಬಂದಿಖಾನ್ಯಾಂತ್ ಆಸ್ಚ್ಯಾ ಜುಜೆಕ್ ಆಪಂವ್ಕ್ ಧಾಡ್ಲೆಂ, ಜುಜೆ ಆಪ್ಲಿ ಖಾಡ್ ತಾಸುನ್, ನ್ಹಾವ್ನ್, ನಿತಳ್ ಮುಸ್ತಾಯ್ಕಿ ಘಾಲುನ್ ರಾಯ್ ಮುಕಾರ್ ಉಬೊ ಜಾಲೊ. ತವಳ್ ಫಾರವ್ಯಾನ್ ಜುಜೆಕ್ ಸವಾಲ್ ಕೆಲೆಂ" ಮ್ಹಾಕಾ ಖಬರ್ ಮೆಳ್ಳ್ಯಾ ತುಂ ಸ್ವಪಾಣ್ ಪಾರ್ಕಿ ಮ್ಹಣ್... ಆನಿಂ ಮ್ಹಾಕಾ ಪಡಲ್ಲ್ಯಾ ಸ್ವಪ್ಣಾಚೊ ಅರ್ಥ್ ಕೋಣಾಚ್ಯಾನಿಂ ಸುಟೊವ್ನ್ ಸಾಂಗೋಂಕ್ ಜಾಲೆಂ ನಾ... ತುಕಾ ಸ್ವಪಾಣ್ ಪಾರ್ಕುನ್ ಸಾಂಗ್ಚಿ ತಾಂಕ್ ಆಸಾ?" ತೆದ್ನಾ ಜುಜೆನ್ ಜಾಪ್ ದಿಲಿ "ಮ್ಹಾಕಾ ತಸಲಿ ತಾಂಕ್ ನಾ, ಪುಣ್ ಫಾರಾವ್ಯಾಕ್ ಬರೆಂ ಜಾಂವ್ಕ್ ಮ್ಹಣ್, ಸ್ವಪಾಣ್ ಪಾರ್ಕುಂಕ್ ಸರ್ವೆಸ್ಪರ್ ದೇವ್ ಮ್ಹಾಕಾ ಕುಮೊಕ್ ಕರ್ತಾಲೊ.

ಅಶೆಂ ಸರ್ವೆಸ್ಪರ್ ದೇವಾಚ್ಯಾ ಆಶಿರ್ವಾದಾನಿಂ ಜುಜೆಕ್ ಬಂದೆಂತ್ಲಿ ಸುಟ್ಕಾ ಮೆಳ್ಳಿ.

ಸ್ವಪ್ಣಾಂ : ಫಾರಾವೊ ಜುಜೆಕಡೆಂ ಆಪ್ಣಾಕ್ ಪಡಲ್ಲ್ಯಾ ಸ್ವಪ್ಣಾಂವಿಶಿಂ ಸಾಂಗಾಲಾಗ್ಲೊ "ನೀಲ್ ನ್ಹಂಯ್ ದೆಗೆರ್ ಸಾತ್ ಪುಷ್ಟಿ ಆನಿಂ ಪುಡ್ಪುಡಿತ್ತ್ ಗಾಯೊ ತಣ್ ಚರ್ತಲ್ಯೊ ತವಳ್ ಆನಿಕ್ ಸಾತ್ ಭಾಗೆಟ್ಯೊ ವಿದ್ರುಪ್ ಗಾಯೊ ಆಯ್ಲ್ಯೊ ಆನಿಂ ಚರವ್ ಚರೊನ್ ಆಸಲ್ಲ್ಯಾ ತ್ಯಾ ಪುಡ್ಪುಡಿತ್ತ್ ಗಾಂಯಾಂಕಿ ತಾಣಿಂ ಗೀಳ್ನ್‌ಸೊಡ್ಲೆಂ! ತರೀಯ್ ತ್ಯೊ ಭಾಗೆಟ್ಯೊ ಗಾಯೊ ಭಾಗೆಟ್ಯೊಚ್ಚ್ ಉರ್ಲ್ಯೊ. ಆನಿಂ ತಿತ್ಲ್ಯಾರ್ ಮ್ಹಾಕಾ ಜಾಗ್ ಜಾಲಿ. ಥೊಡ್ಯಾಚ್ ವೆಳಾನ್ ಮ್ಹಾಕಾ ಪರ್ತ್ಯಾನ್ ನೀದ್ ಪಡ್ಲಿ ಪರತ್ ಆನ್ಯೇಕ್ ಸ್ವಪಾಣ್ ಪಡ್ಲೆಂ ಸಾತ್ ಅಖಂಡ್ ಫಳಾಭರಿತ್ ಕಣ್ಸೊ ಧರ್ಣಿ ಥಾವ್ನ್ ವಯ್ರ್ ಆಯ್ಲ್ಯೊ ತಾಂಚೆ ಪಾಟ್ಲ್ಯಾನ್ ಆನಿಕ್ ಸಾತ್ ಪೋಲ್, ಬಾರೀಕ್ ಆನಿಂ ಸುಕೊನ್ ಗೆಲ್ಲ್ಯೊ ಕಣ್ಸೆ ವಯ್ರ್ ಆಯ್ಲ್ಯೊ ಆನಿಂ ತಾಣಿಂಯ್ ಫಳಾಭರಿತ್ ಕಣ್ಸ್ಯಾಂಕಿ ಗೀಳ್ನ್ ಸೊಡ್ಲೆಂ! ತರೀಯ್ ತ್ಯೊ ಪೋಲ್ ಜಾವ್ನಂಚ್ಚ್ ಉರ್ಲ್ಯೊ.

**"ತ್ಯಾ ದೋನಿ ಸ್ವಪ್ಣಾಂಚೊ ಅರ್ಥ್ ಎಕಚ್ಚ್ ಮ್ಹಣ್ ರಾಯಾನ್ ಸಮ್ಜೊಂಚೆಂ."** ಜುಜೆನ್ ಜಾಪ್ ದೀವ್ನ್

ನಿನ್ನನ್ನು ನನ್ನ ಸೇವಕನಾಗಿಯೂ ಸಾಕ್ಷಿಯಾಗಿಯೂ ನೇಮಿಸುವದಕೋಸ್ಕರ ನಿನಗೆ ಕಾಣಿಸಿಕೊಂಡಿದ್ದೇನೆ
(ಅ.ಕೃ. 26:16).

ಮುಂದರ್ಸಿಲೆಂ "ಜೆಂ ಸರ್ವೆಸ್ಪರ್ ದೇವಾನ್ ಕರುಂಕ್ ಚಿಂತ್ಲಾ ತೆಂ ಫಾರಾವ್ಯಾಕ್ ಕಳಿತ್ ಕೆಲಾಂ... ಸ್ವಪ್ಣಾಂಚೊ ಮತ್ಲಬ್ ಅಸೊ ಆಸಾ, ಎಜಿಪ್ತಾಂತ್ ಸಾತ್ ವರ್ಸಾಂ ಬರೆಂ ಪೀಕ್ ಯೇವ್ನ್ ಸಂಪತ್ತ್ ವಾಡ್ತಲಿ ತಾಚೆ ಉಪ್ರಾಂತ್ ಸಾತ್ ವರ್ಸಾಂ ದುಕೊಳ್ ಪಡ್ತಲೊ ಆನಿಂ ಸುಖ್– ಸಂಪತ್ತೆಚಿ ನಿಶಾನಿ ಮಾಜ್ಸಾತಲಿ. ತ್ಯಾ ದೆಕುನ್ ರಾಯಾನ್ ಎಕ್ ಬುದ್ವಂತ್ ಆನಿಂ ಶಾತೆವಂತ್ ಮನ್ಶ್ಯಾಕ್ ಎಜಿಪ್ತಾಂತ್ಲೆಂ ಕಾರ್ಭಾರ್ ಚಲಂವ್ಕ್ ಸೊದಿಜೆ, ಆನಿಂ ತ್ಯಾ ಮನ್ಶ್ಯಾನ್ ಬರ್‍ಯಾ ಪಿಕಾಚ್ಯಾ ವರ್ಸಾಚೆಂ ಪೀಕ್ ದಾಸ್ತಾನ್ ಕರಿಜಾಯ್ ಅಸೊ ದಾಸ್ತಾನ್ ಕೆಲ್ಲೊ ವರವ್ ಫುಡೆಂ ಯೆಂವ್ಚ್ಯಾ ದುಕೊಳ್ ಕಾಳಾಕ್ ಉಪ್ಯೊಗಾಕ್ ಪಡ್ತಲೊ. ತಶೆಂ ಎಜಿಪ್ತಾಚಿ ಪರ್ಜಾ ನಾಸ್ ಜಾಂವ್ಕ್ ಪಾಂವ್ಚಿನಾ.

ಅಶೆಂ ಜುಜೆನ್ ಫಾರಾವ್ಯಾಚೆಂ ಸ್ವಪಾಣ್ ಪಾರ್ಕುನ್ ಸಾಂಗ್ಲೆಂ.

ಕಾರ್ಭಾರ್. ಜುಜೆಚಿ ಯೆವ್ಜಣ್ ಫಾರಾವ್ಯಾಕ್ ಪಸಂದ್ ಜಾಲಿ ತಾಣೆಂ ಆಪ್ಲ್ಯಾ ಕಾರ್ಭಾರ್‍ಯಾಂಕ್ ಜುಜೆಕ್ ದಾಕವ್ನ್ ಮ್ಹಳೆಂ **"ಹ್ಯಾ ಮನ್ಶ್ಯಾಚ್ಯಾ ಆನ್ಕಿ ವರ್‍ತೊ ಬುದ್ವಂತ್ ಮನಿಸ್ ಆಮ್ಕಾಂ ಮೆಳ್ಚೊನಾ!"**

ಉಪ್ರಾಂತ್ ಫಾರವ್ಯಾನ್ ಜುಜೆಕ್ ಮ್ಹಳೆಂ "ಹ್ಯೊ ಸಂಗ್ತಿ ತುಜ್ಯಾ ದೇವಾನ್ ತುಕಾ ಕಳಿತ್ ಕೆಲ್ಯಾತ್ ದೆಕುನ್ ತುಕಾಚ್ಚ್ ಹಾಂವ್ ಹ್ಯಾ ರಾವ್ಳೆರಾಚೊ ಆನಿಂ ಸಗ್ಳ್ಯಾ ಎಜಿಪ್ತಾಚೊ ಅಧಿಕಾರ್ ಚಲಂವ್ಕ್ ಅಧಿಕಾರಿ ಜಾವ್ನ್ ನೆಮ್ತಾಂ. ಮ್ಹಜೊ ಲೋಕ್ ತುಜೆ ಹುಕ್ಮೆ ಪರ್ಮಾಣೆಂ ಚಲ್ತಾಲೆ. ಹಾಂವ್ ರಾಯ್ ಜಾಲ್ಲ್ಯಾನ್ ಮಾತ್ರ್ ಪಾಟಾರ್ ಬಸ್ತಲೊಂ" ಉಪ್ರಾಂತ್ ತಾಣೆಂ ಆಪ್ಲಿ ಅಧಿಕಾರಾಚಿ ಮುದಿ ಬೊಟಾಂತ್ಲಿ ಕಾಡ್ಲಿ ಆನಿಂ ಜುಜೆಚ್ಯಾ ಬೊಟಾಕ್ ಘಾಲಿ ತಸೆಂಚ್ ರಾಯಾಳ್ ಮುಸ್ತಾಯ್ಕಿ ನ್ಹೆಸವ್ನ್ ತಾಚ್ಯಾ ಗಳ್ಯಾಕ್ ಭಾಂಗಾರಾಚೊ ಸರ್ ಘಾಲುನ್ ತಾಕಾ ಸರೊಟಾರ್ ಬಸಯ್ಲೊ ಆನಿಂ ಮ್ಹಳೆಂ **"ತುಜೆ ಹುಕ್ಮೆ ಬಗಾರ್ ಎಜಿಪ್ತಾಚೊ ಎಕ್ಲೊಯ್ ಹಾತ್ ವ್ ಪಾಂಯ್ ಹಾಲಂವ್ಚೊನಾ"**. ಅಶೆಂ ಸಗ್ಳ್ಯಾ ಎಜಿಪ್ತಾಚೊ ಲೋಕ್ ಜುಜೆಕ್ ಮಾನ್ ಬಾಗಯ್ತಾಲೊ. ಫಾರವ್ಯಾನ್ ಜುಜೆಕ್ "ಜಾಫೆನಾತ್ ಪಾನೆಯ" ಮ್ಹಣ್ ನಾಂವ್ ದಿಲೆಂ ಆನಿಂ ಪೊತಿಫರಾಚಿ ಧುವ್ "ಆಶೆನಾತ" ಸಂಗಿಂ ಲಗ್ನ್ ಕರಯ್ಲೆಂ.

ಬರಯ್ಣಾರ್ : ಜೆಜುದಾಸ್
*(ಡೇವಿಡ್ ಲುವಿಸ್ ತಲ್ಲುರ್).*

---

# ಕವನಗಳು

ಜೀವನ ಹೀಗಿರಬೇಕೆಂದು ಬಯಸಲಿಲ್ಲ
ಜೀವನ ಹೀಗಿರುತ್ತೆ ಎಂದು ಮನಸು ನೆನಸಲಿಲ್ಲ
ಯೋಚಿಸುವುದಕ್ಕಿಂತ ಮಿಗಿಲಾದ ಕಾರ್ಯ ನಿನ್ನದು
ನೀನು ಯೋಜಿಸಿದ ಜೀವಿತ ಅಷ್ಟೇ ನನ್ನದು.

ನೊಂದ ಜೀವಕ್ಕೆ ಸಾಂತ್ವನ
ಹರ್ಷ ಹೃದಯಕ್ಕೆ ಘನಮಾನ
ಪ್ರೀತಿಯನ್ನು ಬಯಸಿದ ಮನಕ್ಕೆ
ಪ್ರೀತಿ ಶಿಖರ ಯೇಸುವಿನ ಆಗಮನ.

ನಿನ್ನ ಸಮ್ಮುಖದಲ್ಲಿ ಸಂಪೂರ್ಣ ಆನಂದ
ನಿನ್ನ ಸಾನ್ನಿಧ್ಯದಲ್ಲಿ ನಾನಿರುವೆ ಸದಾ
ನಿನ್ನ ಸ್ತುತಿಸಿ ಹೊಗಳಿ ಆರಾಧಿಸುವುದೇ
ಈ ನನ್ನ ಜೀವಕ್ಕೆ ಆನಂದ ಪರಮಾನಂದ.

ನೀನೇ ನನ್ನ ಸಹಾಯಕನು
ನಿನ್ನನೇ ಎದುರು ನೋಡುವೆನು
ಕಷ್ಟಗಳು ಹೋರಾಟಗಳು ಬಂದರೇನು
ಕೈಹಿಡಿದು ನಡೆಸುವೆ ನೀನು.

ಜೀವಿತದಲ್ಲಿ ಬಹಳ ಕಷ್ಟಗಳಿದೆ
ಆದರೆ ಲೋಕವನ್ನು ನೀ ಜಯಿಸಿದೆ
ಬಲಹೀನತೆಯಿಂದ ಬಳಲಿಹೋಗದೆ
ನಿನ್ನನ್ನೇ ನೋಡಿ ನಿನ್ನಲ್ಲಿ ಬಲ ಹೊಂದಿದೆ.

ಸಹೋ॥ ದೀಪ್ತಿ ಮಂಗಳ
*ಕಾಮಗೆರೆ ಬೇತೇಲ್ ಚರ್ಚ್.*

ದು:ಖವಿದ್ದಲ್ಲಿ ಆನಂದತೈಲ, ಕುಂದಿದ ಮನಕ್ಕೆ ಪ್ರತಿಯಾಗಿ ಉತ್ಸಾಹಸ್ತೋತ್ರದ ವಸ್ತ್ರ ಇವುಗಳನ್ನು ಒದಗಿಸಿಕೊಡುವುದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ (ಯೆಶಾ. 61:3).

# ಯೇಸುಕ್ರಿಸ್ತನಿಗಾಗಿ ಹಸಿವೆವುಳ್ಳವನಾಗಿರು

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು. ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವದು ಲಾಭವೆ (ಗಲಾ. 1:21). ಕರ್ತನಲ್ಲಿ ಪ್ರಿಯರೇ **"ಈಗಿನ ಕಾಲವು ನಿದ್ದೆಯಿಂದ ಎಚ್ಚರವಾಗ ತಕ್ಕ ಕಾಲವೆಂದು ತಿಳಿದು ಇದನ್ನೆಲ್ಲಾ ಮಾಡಿರಿ ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ ಈಗ ನಮ್ಮ ವಿಮೋಚನೆಯು ಹತ್ತಿರವಾಯಿತು. ಇರುಳು ಬಹಳ ಮಟ್ಟಿಗೆ ಕಳೆಯಿತು; ಹಗಲು ಸಮೀಪವಾಯಿತು. ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳೋಣ. ದುಂದೌತಣ, ಕುಡಿತನಗಳಲ್ಲಿಯಾಗಲಿ, ಕಾಮವಿಲಾಸ, ನಿರ್ಲಜ್ಜಾ ಕೃತ್ಯಗಳಲ್ಲಿಯಾಗಲಿ, ಜಗಳ ಹೊಟ್ಟೇಕಿಚ್ಚುಗಳಲ್ಲಿಯಾಗಲಿ ಕಾಲ ಕಳೆಯದೆ ಹಗಲು ಹೊತ್ತಿಗೆ ತಕ್ಕ ಹಾಗೆ ಮಾನಸ್ಥರಾಗಿ ನಡೆದುಕೊಳ್ಳೋಣ. ದೇಹದ ಆಶೆಗಳನ್ನು ಪೂರೈಸುವದಕ್ಕಾಗಿ ಚಿಂತಿಸದೆ ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿಕೊಳ್ಳಿರಿ"** (ರೋಮ. 13:11–14).

ಇವತ್ತು ಪ್ರಿಯರೇ, **"ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರ್ರಿ. ಈ ದಿನಗಳು ಕೆಟ್ಟವುಗಳಾಗಿವೆ; ಆದದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದೆಂದು ಉಪಯೋಗಿಸಿಕೊಳ್ಳಿರಿ ಮತ್ತು ಬುದ್ಧಿಹೀನರಾಗಿ ನಡೆಯದೆ ಕರ್ತನ ಚಿತ್ತವೇನೆಂಬುದನ್ನು ವಿಚಾರಿಸಿ ತಿಳಿದವರಾಗಿರ್ರಿ"** (ಎಫೆ. 5:15–17).

ಅಂದು ದೇವ ಮನುಷ್ಯನಾದ ಮೋಶೆಯು ಹೀಗೆ ತನ್ನ ಜನರಿಗೋಸ್ಕರವಾಗಿ ಮಧ್ಯಸ್ಥಿಕೆ ವಹಿಸಿ ಪ್ರಾರ್ಥಿಸುತ್ತಾನೆ. **"ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ ನಮಗೆ ಕಲಿಸು; ಆಗ ಜ್ಞಾನದ ಹೃದಯವನ್ನು ಪಡಕೊಳ್ಳುವೆವು" (ಕೀರ್ತ90–12)** ಎಂದು.

ಹೌದು ಪ್ರಿಯರೇ, ಇವತ್ತು ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯ ಕುಮಾರನ ಪ್ರತ್ಯಕ್ಷತೆಯೂ ಇರುವದು. ಹೇಗೆಂದರೆ ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ತನಕ ಜನರು ಉಣ್ಣುತ್ತಾ, ಕುಡಿಯುತ್ತಾ, ಮದುವೆಮಾಡಿಕೊಳ್ಳುತ್ತಾ, ಮಾಡಿಕೊಡುತ್ತಾ ಇದ್ದು ಪ್ರಳಯದ ನೀರು ಬಂದು ಎಲ್ಲರನ್ನು ಬಡುಕೊಂಡು ಹೋಗುವ ತನಕ ಏನೂ ತಿಳಿಯದೆ ಇದ್ದರಲ್ಲಾ, ಅದರಂತೆ ಮನುಷ್ಯಕುಮಾರನು ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವದು (ಮತ್ತಾ.24:37–39).

ಪ್ರಿಯರೇ, ಅಂದು ದಾನಿಯೇಲನು ಕಡೆಯ ದಿವಸದಲ್ಲಿ (ಪಾಪ, ಪ್ರಯಾಣ, ಜ್ಞಾನ) ಈ ಮೂರು ಸಂಗತಿಗಳು ಹೆಚ್ಚಾಗುತ್ತದೆ ಎಂದು ಮುಂತಿಳಿಸಿದ ಹಾಗೆ ನಮ್ಮ ಕಣ್ಣ ಮುಂದೆ ಅದನ್ನು ಕಾಣುತ್ತಿದ್ದೇವೆ. ಇವತ್ತು ಆ ಕಾಲ ಘಟ್ಟದಲ್ಲಿ ನಾವಿದ್ದೇವೆ. ಟಿ.ವಿ. ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ, ನೋಡಲಿಕ್ಕೂ, ಕೇಳಲಿಕ್ಕೂ, ಊಹಿಸಲಿಕ್ಕೂ ಆಗದ ಸಂಗತಿಗಳು ಸ್ಫೋಟಿಸುತ್ತಿವೆ. ದೇಶದಲ್ಲಿ ಬಲತ್ಕಾರದ ಸುದ್ಧಿ, ಭಂಗನಾಶನದ ಸುದ್ಧಿ ಕೇಳಿ ಬರುತ್ತಿದೆ. ಜನರು ಆಕ್ರೋಶಿತರಾಗಿದ್ದಾರೆ. ನ್ಯಾಯಕ್ಕಾಗಿ ಅಧಿಕಾರಿಗಳ ಬಳಿಗೆ, ಪೊಲೀಸ್ ಠಾಣೆ, ಕೋರ್ಟ್ ಮುಂದೆ ಹೋಗಿ ಉಪವಾಸ ಸತ್ಯಗ್ರಹ ನಡೆಸುತ್ತಿದ್ದಾರೆ. ಇವತ್ತು ದೇಶದ ಕಾನೂನಿನ ಸುವ್ಯವಸ್ಥೆ ಬೀದಿಗೆ ಬಂದಿದೆ. ಹಣಕ್ಕಾಗಿ ನ್ಯಾಯವೂ ಮಾರಲ್ಪಟ್ಟಿದೆ. ಜನ ಸಮೂಹವು ನ್ಯಾಯಕ್ಕಾಗಿ ಸಂಘಟಣೆ ಕಟ್ಟಿಕೊಂಡು ಬೀದಿಗಿಳಿದು ತಾವೇ ಹೋರಾಟ ನಡೆಸುತ್ತಿದ್ದಾರೆ. ದೇಶದಲ್ಲಿ ಯಾವಾಗ ಯುದ್ಧ ಸಂಭವಿಸುತ್ತದೆ ಎಂಬ ಭಯ ಮುಂದಕ್ಕೆ ಏನು ಕಾದಿದೆ ಎಂಬ ಭಯ ಆವರಿಸಿಕೊಂಡಿದೆ.

ಎಡಗೈಗೂ ಬಲಗೈಗೂ ವ್ಯತ್ಯಾಸ ತಿಳಿಯದ ಎಷ್ಟೋ ಜನರು ಲೋಕದ ಮೃತ್ಯುಪಾಶಕ್ಕೆ ಸಿಲುಕಿ ನರಕದ ಕಡೆಗೆ ಬೀಳುತ್ತಿರುವಾಗ ಪ್ರಿಯ ದೇವ ಸಭೆಯೇ ಇವತ್ತು ಲೋಕದ ಅಮಲಿನಿಂದ ಎಚ್ಚೆತ್ತುಕೋ. ಅಂಟಿಕೊಂಡಿರುವ ಧೂಳನ್ನು ಝೂಡಿಸಿಕೋ, ನಿದ್ದೆಯಿಂದ ಎದ್ದೇಳು, ಸತ್ತವರನ್ನು ಬಿಟ್ಟು ಏಳು ಕ್ರಿಸ್ತನು ನಿನಗೆ ಪ್ರಕಾಶಕೊಡುವನು. ಕೊಳೆತು ಹೋಗುವ ಲೋಕದ ಮಧ್ಯದಲ್ಲಿ ಪ್ರಿಯ ದೇವ ಸಭೆಯೇ ಕೊಳೆತು ಹೋಗುವದಕ್ಕಾಗಿ ಅಲ್ಲ, ಅನೇಕ ಹತಶರೀರಗಳು, ಒಣಗಿದ ಎಲುಬುಗಳು, ನಿನ್ನ ಮುಂದೆ ಅದು ಬಿದ್ದಿರುವಾಗ ಅದರ ಆಕ್ರಂಧನವು ನಿನ್ನ ಕಿವಿಗೆ ಬೀಳುತ್ತಿಲ್ಲವೋ? ಅಂದು ಯೆರೆಮೀಯ ಸೆರೆಗೆ, ಬಾಧೆಗೆ, ಗುಲಾಮತನಕ್ಕೆ, ಸಂಕಷ್ಟಕ್ಕೆ,

ನೀನು ನನ್ನ ಮಾತನ್ನು ಕೇಳಿದ್ದರಿಂದ ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು (ಆದಿ. 22:18).

ಸಾವಿಗೆ ಒಳಪಟ್ಟ ತನ್ನ ಜನರಿಗಾಗಿ ಪ್ರಲಾಪಿಸುತ್ತಾನೆ. ನೀರು ಸುರಿದು ಸುರಿದು ನನ್ನ ಕಣ್ಣು ಇಂಗಿ ಹೋಗಿದೆ, ನನ್ನ ಕರುಳು ಕುದಿಯುತ್ತದೆ, ನನ್ನ ಜನವೆಂಬ ಯುವತಿಯು ಹಾಳಾಗಿ ಮಕ್ಕಳು ಮರಿಗಳು ಪಟ್ಟಣದ ಚೌಕಗಳಲ್ಲಿ ಮೂರ್ಛೆ ಹೋದದರಿಂದ ನನ್ನ ಕರುಳು ಕುದಿಯುತ್ತದೆ (ಪ್ರಲಾ. 2:11). ಅಂದು ಹತ ಮೂಳೆಗಳ ತಗ್ಗಿನಲ್ಲಿ ನಿಂತು ಯೆಹೆಜ್ಕೇಲನು ದೇವರ ಮಾತನ್ನು ನುಡಿದ ಹಾಗೆ ಈ ದಿನದಲ್ಲಿ ದೇವರ ಮಾತನ್ನು ನುಡಿಯಲೇ ಬೇಕಾಗಿದೆ.

ಅಂದು ಪೌಲನು ಕ್ರಿಸ್ತನ ಸುವಾರ್ತೆ ನಿಮಿತ್ತವಾಗಿ ಸೆರೆಮನೆಯಲ್ಲಿ ಇದ್ದಾಗಲೂ ಸುವಾರ್ತೆ ಸಾರಲ್ಪಡುವ ಸಹೋದರನನ್ನು ನೆನೆಸಿಕೊಂಡು ಸಂತೋಷಪಟ್ಟು ಆತನು ಹೇಳುತ್ತಿದ್ದಾನೆ, ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವದು ಲಾಭವೇ. ನಾನು ಸಾಯುವುದಾದರೆ ಕ್ರಿಸ್ತನ ಜೊತೆ ಇರಬಹುದು. ಅದು ಉತ್ತಮೋತ್ತಮ: ನಾನು ಬದುಕುವುದಾದರೇ ಅದು ಅನೇಕರಿಗೆ ಬಹು ಅವಶ್ಯವಾಗಿರುತ್ತದೆ.

ಇವತ್ತು ನಾವು ನಮ್ಮ ಸ್ವಾರ್ಥತೆಯಿಂದ ಗುದ್ದಾಡುವಿಕೆಯಿಂದ, ಹೊಟ್ಟೆಕಿಚ್ಚಿನಿಂದ, ಕಹಿತನದಿಂದ, ಸ್ವನೀತಿಕರಣದಿಂದ, ಪಾಪದಿಂದ, ಸ್ಥಾನಮಾನಗಳಿಂದ, ಹೊರಬರಬೇಕಾಗಿದೆ. ಕ್ರಿಸ್ತ ಯೇಸುವಿನವರು ನಮ್ಮ ಶರೀರ ಭಾವವನ್ನು ಅದರ ವಿಷಯಾಭಿಲಾಷೆ, ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದರು (ಗಲಾ. 5:24).

ಅಪೋಸ್ತಲನಾದ ಪೌಲನು ಹೇಳುತ್ತಾನೆ, ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗೆಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು. ನಾನು ದೇವರ ಕೃಪೆಯನ್ನು ನಿರರ್ಥಕ ಮಾಡುವದಿಲ್ಲ (ಗಲಾ. 2:20).

ನಾವು ಶಿಲುಬೆಗೆ ಹಾಕಲ್ಪಡದ ಹೊರತು ನಮ್ಮಲ್ಲಿ ದೇವರ ಬಲದ ಪ್ರದರ್ಶನ ಕಾಣಲು ಸಾಧ್ಯವಾಗುವುದಿಲ್ಲ. ಶಿಲುಬೆಗೆ ಹಾಕಲ್ಪಡದೆ ಪುನರುತ್ಥಾನವಿಲ್ಲ, ಪುನರುತ್ಥಾನ ಆಗದೆ ಮಹಿಮೆ ಇಲ್ಲ. ಇಷ್ಟು ಹೊತ್ತಿಗೆ ಎಷ್ಟು ಆಶೀರ್ವಾದಗಳನ್ನು ಹೊಂದಿಕೊಂಡು ಜೀವಿಸಬೇಕಾಗಿತ್ತು ಆದರೆ ಅದನ್ನೆಲ್ಲಾ ಕಳೆದುಕೊಂಡು ಸಮಾಧಿಯ ಪೆಟ್ಟಿಗೆಯಲ್ಲಿ ಮಲಗಿದ್ದೇವೆ.

ಪ್ರಿಯನೇ ದೇವರಿಗಾಗಿ ಮಹತ್ತರವಾದ ಕಾರ್ಯಗಳನ್ನು ಮಾಡಬೇಕೆಂಬ ಕಾತುರತೆಯಲ್ಲಿ ಇದ್ದಿರೋ? ಅಂದು ಪೌಲನನ್ನು ಲೋಕವು ತಳ್ಳಿತು. ಒಬ್ಬ ಕುಳ್ಳನಾಗಿದ್ದನು, ಆತನ ಶರೀರವು ಬತ್ತಿಹೋಗಿತು. ಆತನ ಕಣ್ಣುಗಳು ಒಳಗಡೆಹೋಗಿದ್ದವು. ರೋಮ ಸರ್ಕಾರದಿಂದ ಅನೇಕ ಚಾಟಿ ಏಟುಗಳನ್ನು ಹೊಡೆಸಿಕೊಂಡನು, ಕಳ್ಳರ ಅಪಾಯ, ಸ್ವಂತ ಸಹೋದರರ ಅಪಾಯ, ಸೆರೆವಾಸ, ಕಲ್ಲಿನ ಏಟುಗಳು, ಕ್ರಿಸ್ತನಿಗಾಗಿ ಅನೇಕ ಹಿಂಸೆಗಳನ್ನು, ಸಂಕಟಗಳನ್ನು, ನಿಂದೆ ಅವಮಾನಗಳನ್ನು ತಾಳಿಕೊಂಡನು. ಕ್ರಿಸ್ತನ ಪ್ರೀತಿ ಪೌಲನ ಹೃದಯವನ್ನು ತಟ್ಟಿದ್ದರಿಂದ ಲೋಕದ ಪ್ರೀತಿಯು ಆತನನ್ನು ಜಯಿಸಲಾಗಲಿಲ್ಲ. ಅತನ ದೇಹದ ನಿರ್ಬಲಾವಸ್ಥೆಯೂ ಕೂಡಾ ಆತನನ್ನು ಸೇವೆಯಲ್ಲಿ ಮುಂದುವರಿಯದಂತೆ ತಡೆಯಲಿಕ್ಕೆ ಸಾಧ್ಯವಾಗಲಿಲ್ಲ. ಆತನ ತಲೆ ಕತ್ತರಿಸಲ್ಪಡುವರೆಗೂ ಏಷ್ಯಾದ ಎರಡು ಖಂಡವನ್ನು ಬಲವಾಗಿ ಕ್ರಿಸ್ತನಿಗಾಗಿ ಅಲ್ಲಾಡಿಸಿದನು. ಅನೇಕ ಸಭೆಗಳನ್ನು ಸ್ಥಾಪಿಸಿದನು. ಇದಕ್ಕೆಲ್ಲಾ ಕಾರಣ ಪೌಲನಿಗೆ ಯೇಸುಗಾಗಿ ಬಹಳಷ್ಟು ಹಸಿದಿದ್ದನು ಅದಕ್ಕಾಗಿ ಆತನು ತನ್ನನ್ನೇ ಕ್ರಿಸ್ತನಿಗಾಗಿ ಮಾರಿದನು. ತನ್ನ ಸಂಪತ್ತು, ಐಶ್ವರ್ಯ, ಸ್ಥಾನಮಾನವೆಲ್ಲಾ ಫಿಲಿ. 3:7–14 ವಾಕ್ಯದ ಪ್ರಕಾರ ಸಮರ್ಪಿಸಿದನು. ಇದರ ನಿಮಿತ್ತವಾಗಿ ಪೌಲನಲ್ಲಿ ದೇವರ ಉದ್ದೇಶ ನೇರವೇರಲ್ಪಟ್ಟಿತು ಇವತ್ತು ಪ್ರಿಯನೇ, ಕ್ರಿಸ್ತನಿಗಾಗಿ ಪ್ರಜ್ವಲಿಸಬೇಕು. ನನ್ನ ದೇಶದ ರಕ್ಷಣೆಗಾಗಿ ನಾನು ಸುಡಲ್ಪಡಬೇಕು ಎಂಬ ಮಹತ್ತರವಾದ ಆಸೆ ನಿನ್ನೊಳಗೆ ಇರುವುದಾದರೆ, ಯೇಸುಕ್ರಿಸ್ತನಿಗಾಗಿ ಹಸಿವೆವುಳ್ಳವನಾಗಿರು. ಕ್ರಿಸ್ತನ ಪ್ರೀತಿ ಆತನ ಸೇವೆ ಮಾಡುವಂತೆ, ಅನೇಕ ಆತ್ಮಗಳನ್ನು ಗೆಲ್ಲುವಂತೆ, ಸಭೆಗಳನ್ನು ಸ್ಥಾಪಿಸುವಂತಹ ವೈರಾಗ್ಯ ನಿನ್ನೊಳಗೆ ಹತ್ತಿ ಉರಿಯಲಿ.

ಕರ್ತನು ತಾನೇ ನಿಮ್ಮೆಲ್ಲರನ್ನು ಹೇರಳವಾಗಿ ಆಶೀರ್ವದಿಸಲಿ.

ಕಷ್ಟದಲ್ಲಿದ್ದ ಈ ಮನುಷ್ಯನು ಮೊರೆಯಿಡಲು ಯೆಹೋವನು ಕೇಳಿ ಎಲ್ಲಾ ಬಾಧೆಗಳಿಂದ ಬಿಡಿಸಿದನು (ಕೀರ್ತ. 34:6).

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

# ಮಹಿಳೆಯರ ಸ್ವರ

ಇಸ್ರಾಯೇಲರು ಒಬ್ಬನೇ ಸತ್ಯದೇವರ ಆರಾಧಕರಾದರೆ ಮೋವಾಬ್ಯರು ಕೆಮೋಷ್, ಮೇಲೆಕ್, ಬಾಳ್, ಅಶೇರ್ ಮುಂತಾದ ಇನ್ನೂ ಅನೇಕ ಅಸಹ್ಯವಾದ ದೇವತೆಗಳನ್ನು ಆರಾಧಿಸುವವರಾಗಿದ್ದರು. ಆದರೆ ಇಸ್ರಾಯೇಲರು ವಾಸವಾಗಿದ್ದ ವಾಗ್ದಾತ್ತ ದೇಶದಲ್ಲಿ ಭಯಂಕರವಾದ ಬರ ಬಂದಿದ್ದರೆ ಮೋವಾಬಿನಲ್ಲಿ ಸಮೃದ್ಧಿ ಇರುವುದನ್ನು ನೋಡುತ್ತೇವೆ. ಇದು ಒಂದು ವಿಚಿತ್ರವಾದ ಸಂಗತಿಯಾಗಿದೆ. ದೇವರು ಮೋವಾಬ್ಯರ ಜೀವನಕ್ಕೆಬೇಕಾದ ಆಹಾರಕೊಟ್ಟದ್ದು ನಿಜ. ಇದು ಆತನ ಒಂದು ಒಳ್ಳೇಯ ಗುಣವಾಗಿದೆ. ಆದರೆ ತಾನು ಆದುಕೊಂಡ ಈ ಜನರು ತನ್ನನ್ನು ಬಿಟ್ಟು ದಾರಿ ತಪ್ಪಿದಾಗ ಅವರು ತಮ್ಮ ಅಂತರ್ಯದಲ್ಲಿ ತನ್ನನ್ನು ಅರಿತು ತನ್ನನ್ನು ಆರಾಧಿಸುವ ವರಾಗುವಂತೆ ಅವರಿಗೆ ಶಾರೀರಿಕ ಕೊರತೆಯನ್ನು ಉಂಟು ಮಾಡಿದನು. ಹೀಗೆ ಆತನು ನಮ್ಮನ್ನು ಗದರಿಸಿ ಶಿಕ್ಷಿಸುವಾಗ ಆತನ ಶಿಕ್ಷೆಯನ್ನು ನಾವು ತಾತ್ಸರ ಮಾಡಬಾರದು. ಯಾಕೆಂದರೆ ಆತನು ನಮ್ಮನ್ನು ಗದರಿಸಿ ಶಿಕ್ಷಿಸುವುದು ನಮ್ಮ ಮೇಲಿರುವ ಪ್ರೀತಿಯಿಂದಲೇ ಆತನು ನಮ್ಮನ್ನು ಶಿಕ್ಷಿಸುವುದು. ನಮ್ಮ ಮೇಲಿಗಾಗಿಯೇ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ದೇವರು ಇಸ್ರಾಯೇಲರಿಗೆ ವಾಗ್ದಾತ್ತವಾಗಿ ಕೊಟ್ಟ ದೇಶದ ಮೇಲೆ ಬರ ಬಂದಾಗ ಬೆತ್ಲೆಹೇಮಿನವನಾದ ಎಲೀಮಲೆಕನು ಮೋವಾಬಿಗೆ ಹೋಗಬಾರದಾಗಿತು. ಯಾಕೆಂದರೆ ಮೋವಾಬ್ಯರು ಇಸ್ರಾಯೇಲರಿಗೆ ವಿರೋಧಿಗಳು. ಇಸ್ರಾಯೇಲರು ಕಾನಾನಿಗೆ ಬಂದಾಗ ಅವರಿಗೆ ವಿರೋಧವಾಗಿ ಹೋರಾಡಿ ಅವರನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಂಡರೆಂದೂ, ಮುಂದೆ ದಾವೀದನು ಅವರನ್ನು ಸೋಲಿಸಿ ತನ್ನ ಗುಲಾಮರನ್ನಾಗಿ ಮಾಡಿಕೊಂಡನೆಂದು ನೆಹೆಮೀಯನ ಕಾಲದಲ್ಲಿ ಇಸ್ರಾಯೇಲರು ಬಿದ್ದು ಹೋದ ಯೆರೂಸಲೇಮಿನ ಗೋಡೆಯನ್ನು ಕಟ್ಟುತ್ತಿರುವಾಗ ಮೋವಾಬಿನವನಾದ ಸನ್ಬಲ್ಲಟನು ಅದಕ್ಕೆ ಅಡ್ಡ ಮಾಡಿದನೆಂದು ತಿಳಿದುಕೊಳ್ಳಬಹುದು. ನೆಹೆ. 2:10–19–20 ಹೀಗೆ ಅವರು ಇಸ್ರಾಯೇಲರನ್ನು ಹಾಳು ಮಾಡುವವ ರಾಗಿದ್ದರಿಂದಲೇ ದೇವರು ಇಸ್ರಾಯೇಲರಿಗೆ ನೀವು ಮೋವಾಬ್ಯರನ್ನು ಸಂಪೂರ್ಣ ನಾಶಮಾಡಿರಿ ಎಂದು ಹೇಳಿದನು.

ಧರ್ಮೋ. 7:1–2 ದೇವರ ಶಿಕ್ಷೆ ಎಷ್ಟು ಕಠಿಣವಾಗಿದ್ದರೂ, ದೇಶದ ಮೇಲಿದ್ದ ಬರವು ಎಷ್ಟು ಘೋರವಾಗಿದ್ದರೂ, ಎಲೀಮಲೇಕನೂ ಅವನ ಕುಟುಂಬ ಮಕ್ಕಳು ಬೆತ್ಲೆಹೇಮಿನಲ್ಲಿಯೇ ನಿಂತು ತಮ್ಮ ಆತ್ಮೀಯ ಕ್ಷೇಮಾಭಿವೃದ್ಧಿ ಹೊಂದುವುದಕ್ಕಾಗಿ ದೇಶದ ಮೇಲಿದ್ದ ಭಾರವನ್ನು ಅವರು ಎದುರಿಸಬಹುದಾಗಿತ್ತು. ಆದರೆ ಶಾರೀರಿಕ ರಕ್ಷಣೆಗಾಗಿ ಎಲೀಮಲೇಕನು ತನ್ನ ಕುಟುಂಬ ಸಮೇತವಾಗಿ ಮೋವಾಬಿಗೆ ಹೋದನು. ಇದು ದೇವರ ಚಿತ್ತಕ್ಕೆ ವಿರುದ್ಧವಾಗಿತ್ತು. ನಂಬಿಕೆಯ ಜೀವಿತದಲ್ಲಿ ಕಷ್ಟ, ನಷ್ಟ, ಹೋರಾಟ ಸಮಸ್ಯೆಗಳು ಬಂದಾಗ ನಾವು ಏನು ಮಾಡಬೇಕು.

1) ಪ್ರಾರ್ಥಿಸಬೇಕು (ಕೀರ್ತ. 50:15).

2) ದೇವರಿಗೆ ಸ್ತೋತ್ರಸಲ್ಲಿಸಬೇಕು (ಯೋಬ. 1:21).

3) ನಂಬಿಕೆಯಲ್ಲಿ ದೃಢವಾಗಿ ನಿಲ್ಲಬೇಕು (1 ಪೇತ್ರ. 5:6–12, ಎಫೆ. 6:16).

4) ದೇವರ ಮೇಲೆ ತಪ್ಪು ಹೊರಿಸಬಾರದು (ಯೋಬ. 1:22).

5) ಕಷ್ಟಗಳನ್ನು ಆನಂದಕರವೆಂದು ಎಣಿಸಬೇಕು (ಯಾಕೋ. 1:1–3).

6) ದೇವರ ಕರಗಳಿಗೆ ಒಪ್ಪಿಸಿಕೊಡಬೇಕು (1 ಪೇತ್ರ. 2:23).

7) ಆಶ್ಚರ್ಯಪಡಬಾರದು (1 ಪೇತ್ರ. 4:12).

8) ತಪ್ಪಿಹೋಗಬಾರದು (ಕೀರ್ತ. 119:67).

9) ನಂಬಿಕೆಯ ಅರಿಕೆ ಮಾಡಬೇಕು (ಕೀರ್ತ. 23:4–6).

10) ವಾಕ್ಯದಲ್ಲಿ ನಿಲ್ಲಬೇಕು (ಮತ್ತಾ. 7:24–27).

ಮತ್ತಾಯನ ಸುವಾರ್ತೆ ಮೊದಲನೆಯ ಅಧ್ಯಾಯದಲ್ಲಿ ಬರುವ ಕ್ರಿಸ್ತನ ವಂಶಾವಳಿಯಲ್ಲಿ 5 ಮಹಿಳೆಯರ ಹೆಸರುಗಳನ್ನು ಕಾಣಬಹುದು.

1. ತಾಮಾರ

2. ರಾಹಾಬಾ

3. ಬತ್ಷೇಬ

4. ರೂತ

5. ಮರಿಯ. ಇದರಲ್ಲಿ ಅನೇಕರ ಚರಿತ್ರೆಯು ದು:ಖದ ಕಥೆಗಳೇ

ನಾನೇ ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿಯನ್ನು ಉಂಟುಮಾಡುವೆನು
(ವಿಮೋ. 33:14).

ಆಗಿವೆ. ಸೋಲು ಮತ್ತು ಅವಮಾನಗಳಿಂದ ತುಂಬಿದ ಅವರ ಜೀವನದಲ್ಲಿ ಕರ್ತನ ಕೃಪೆಯು ಇದ್ದದ್ದರಿಂದ ಆಶೀರ್ವಾದಿಸಲ್ಪಟ್ಟರು. ರೂತಳ ಪುಸ್ತಕದಲ್ಲಿ ರೂತಳು ಮೋವಾಬ್ಯ ಸ್ತ್ರೀ ಎಂದು 5 ಕಡೆಗಳಲ್ಲಿ ಬರೆಯಲ್ಪಟ್ಟಿದೆ (ರೂತ. 1:22, 2:2, 2:21, 4:5, 4:10). ಮೋವಾಬ್ಯ ರೂತಳ ಚರಿತ್ರೆಯೇ ಬಹಳ ಸುಂದರವಾದದ್ದು. ನವೋಮಿಯ ಗುಣಾತಿಶಯಗಳೊ ಇನ್ನು ಸುಂದರವಾದದ್ದು. ತನ್ನ ಸೊಸೆಯಂದಿರ ಮೇಲೆ ಅವಳು ತೋರಿಸಿದ ನಿಷ್ಕಪಟವಾದ ಪ್ರೀತಿಯು ನಾವು ಅವಳನ್ನು ಮೆಚ್ಚಬೇಕಾದದ್ದೇ. ಬೋವಜನ ಗುಣಗಳು ಸಹ ವಿಶೇಷವಾದದ್ದೇ ದೇವರಿಗೆ ಭಯಭಕ್ತಿಯುಳ್ಳವನಾಗಿ ತನ್ನ ಕೆಲಸದವರಿಂದಲೂ ಸಮಾಜದ ಜನರಿಂದಲೂ ಹೊಗಳಿಕೆಗೆ ಪಾತ್ರನಾಗಿದ್ದನು. ರೂತಳ ಗುಣಗಳು ಕೂಡ ವಿಶೇಷವಾದದ್ದು. ಜೀವಿಸುವ ದೇವರನ್ನು ತನ್ನ ದೇವರಾಗಿ ಅಂಗೀಕರಿಸಿಕೊಂಡಳು. ದೇವರಿಗಾಗಿ, ನಂಬಿಕೆಗಾಗಿ ತನ್ನ ಸ್ವಂತ ದೇಶವನ್ನು, ಸ್ವಂತ ಜನರನ್ನು ಬಿಟ್ಟು ಬಂದಳು. ದೇವ ಜನರ ಅನ್ಯೋನ್ಯತೆ ಬಯಸಿದಳು. ಗಂಡ ಸತ್ತರೂ ಅತ್ತೆಯನ್ನು ತ್ಯಜಿಸದೆ ಪ್ರೀತಿಸಿ ಅತ್ತೆಯ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡಳು. ಒರ್ಫಳು ಹಿಂದುರುಗಿ ಹೋದರೂ ತೀರ್ಮಾನದಲ್ಲಿ ಚಂಚಲಳಾಗದೆ ಇಸ್ರಾಯೇಲ್ ದೇಶಕ್ಕೆ ಬಂದಳು. ಸತ್ಯವೇದದಲ್ಲಿರುವ ಪ್ರತಿ ಹೆಸರಿಗೆ ಒಂದೊಂದು ಅರ್ಥವಿದೆ. ಅದೇ ರೀತಿಯಲ್ಲಿ ರೂತಳ ಪುಸ್ತಕದಲ್ಲಿರುವ ಪ್ರತಿಯೊಂದು ಹೆಸರಿಗೆ ಒಂದೊಂದು ಅರ್ಥವಿದೆ.

1) ಮೋವಾಬ್– ತಂದೆಯಿಂದ ಹುಟ್ಟಿದವನು (ಜಾರ ಸಂತತಿ).
2) ಬೆತ್ಲೇಹೇಮ್– ರೊಟ್ಟಿಯ ಮನೆ
3) ಎಲಿಮಲೇಕ್– ಯೆಹೋವನು ನನ್ನ ರಾಜ
4) ಮಹೋನ್– ರೋಗಗ್ರಸ್ತ
5) ಕಿರ್ತ್ಯೋನ್ – ಬಲ ಇಲ್ಲದವನು
6) ನವೋಮಿ – ರಮಣೀಯ
7) ಬೋವಜ – ಶಕ್ತಿಯುಳ್ಳವನು
8) ರೂತ – ಸ್ನೇಹಿತೆ
9) ಒರ್ಫ – ಕುತ್ತಿಗೆ
10) ಓಬೇದ – ಉಜ್ಜೀವಿಸ ಮಾಡುವವನು
11) ಇಷಯ (ಜೆಸ್ಸೆ) ಅಭಿವೃದ್ಧಿ
12) ದಾವೀದ – ಕೆಂಪು, ಸುಂದರ.

ರೂತ ಒಂದನೇ ಅಧ್ಯಾಯದಲ್ಲಿ 22 ವಚನಗಳಿವೆ. ಒಂದನೇ ಅಧ್ಯಾಯದ 22 ವಚನಗಳನ್ನು 7 ವಿಭಾಗಗಳನ್ನಾಗಿ ವಿಂಗಡಿಸಬಹುದು.

1) 1:1 ಒಂದನೇ ವಚನ ಬರಗಾಲ ಬಂದಾಗ ಆತ್ಮೀಕ ಹಿಂಜಾರುವಿಕೆ
2) 1:2–5 ದೇವರನ್ನು ಬಿಟ್ಟು ಹೋದಾಗ ಕಳಕೊಂಡ ಸಂಗತಿಗಳು
3) 1:6 ಇಸ್ರಾಯೇಲಿನ ಬೇತ್ಲೆಹೇಮಿನಿಂದ ಬಂದ ಶುಭಸಂದೇಶ
4) 1:7–14 ತನ್ನ ಸ್ವಂತ ದೇಶ ದೇವರ ಸನ್ನಿಧಾನ ಇರುವ ದೇಶಕ್ಕೆ ಪ್ರಯಾಣ
5) 1:15–18 ರೂತಳ ದೃಢವಾದ ತೀರ್ಮಾನ
6) 1:19–21 ನವೋಮಿ ರೂತಳೊಂದಿಗೆ ತನ್ನ ಊರಿಗೆ ಬಂದಾಗ ಉಂಟಾದ ಗದ್ದಲ
7) 1:22 ಸುಗ್ಗಿಯ ಆರಂಭ.

1) ರೂತ. 1:1 ಬರಗಾಲ ಬಂದಾಗ ಉಂಟಾದ ಆತ್ಮೀಕ ಹಿಂಜಾರುವಿಕೆ ಅನೇಕ ವಾಗ್ದಾನಗಳು ರಕ್ಷಣೆ ಹೊಂದಿದ ಕೆಲವೇ ಸಮಯಗಳಲ್ಲಿ ಹಿಂಜಾರಿ ಹೋಗಲು ಕಾರಣವೇನು?

ನಂಬಿಕೆಯ ಜೀವಿತದಲ್ಲಿ ಸ್ಥಿರವಾಗಿ ನಿಲ್ಲದೆ ಇರಲು ಕಾರಣಗಳೇನು? ನಂಬಿಕೆಯ ಜೀವಿತದಲ್ಲಿ ಹಿಂಜಾರಿ ಹೋದಾಗ, ಶತ್ರುವಿನ ಅನೇಕ ಆಕ್ರಮಣಗಳಿಗೆ ಒಳಗಾಗಿ ಅನೇಕ ಆಶೀರ್ವಾದಗಳನ್ನು ಕಳಕೊಂಡು ದು:ಖಿಸುವಂತಹ ಸನ್ನಿವೇಶ ಬರುತ್ತದೆ.

**"ನಾವು ಬಾಬೆಲ್ ದೇಶದ ನದಿಗಳ ಬಳಿಯಲ್ಲಿ ಕೂತುಕೊಂಡು ಚೀಯೋನನ್ನು ನೆನಸಿ ಅತ್ತೆವು" (ಕೀರ್ತ. 137:1).**

ಮುಂದುವರಿಯುವದು........

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನಿನ್ನ ವಿಜ್ಞಾಪನೆಯ ಆರಂಭದಲ್ಲಿಯೇ ದೇವರ ಅಪ್ಪಣೆಯಾಯಿತು. ಅದನ್ನು ನಿನಗೆ ತಿಳಿಸಲು ಇಲ್ಲಿಗೆ ಬಂದಿದ್ದೇನೆ. ನೀನು ದೇವರಿಗೆ ಅತಿಪ್ರಿಯ (ದಾನಿ. 9:23).

# ಕರ್ತನ ಸನ್ನಿಧಿಯೂ ಆತನ ಪವಿತ್ರಪಾದವೂ

ಕರ್ತನ ಸನ್ನಿಧಾನವನ್ನು, ಆತನ ಪವಿತ್ರ ಪಾದವನ್ನು ಕುರಿತು ನಾವು ಚಿಂತನೆ ಮಾಡುವದಾದರೆ, ಕರ್ತನ ಸನ್ನಿಧಾನ ಅಂದರೆ ಕರ್ತನ ಪ್ರಸನ್ನತೆಯನ್ನು ಹೆಚ್ಚಾಗಿ ಧ್ಯಾನಿಸುವವರಾಗಿದ್ದೇವೆ. ಅರಸನಾದ ದಾವೀದನೂ ಸಹ, ತಾನು ಎಲ್ಲಿ ಹೋದರೂ ಆತನ ಪ್ರಸನ್ನತೆಯನ್ನು ಗ್ರಹಿಸುವವನಾಗಿರುವದನ್ನು ಕುರಿತು ಕೀರ್ತ. 139:7–10ರಲ್ಲಿ ವಿವರಿಸಿರುವದನ್ನು ಕಾಣುತ್ತೇವೆ. ಕರ್ತನ ಪ್ರಸನ್ನತೆಯು ಎಲ್ಲೆಡೆ ವ್ಯಾಪಿಸಿರುವದನ್ನು ಅದು ನಮಗೆ ಬೋಧಿಸುತ್ತದೆ. ಅದು ಮಾತ್ರವಲ್ಲ ದೇವ ಮಕ್ಕಳು ಯಾವಾಗಲೂ ಪ್ರಾರ್ಥನೆಯಲ್ಲಿ, ಆರಾಧನೆಯಲ್ಲಿ ಆತನ ಸನ್ನಿಧಾನವನ್ನು ಹುಡುಕುತ್ತೇವೆ. ಅದು ನಮ್ಮ ನಿತ್ಯದ ಅವಶ್ಯಕತೆ. ಅದು ನಮ್ಮ ಆಶ್ರಯವಾಗಿದೆ.

ಆದರೆ, ಕರ್ತನ ಪಾದದಲ್ಲಿರುವ ಉನ್ನತವಾದ ಅನುಭವವನ್ನು ಕೆಲವರು ಮಾತ್ರವೇ ತಿಳಿದುಕೊಳ್ಳುವರು. ಯೇಸುಕ್ರಿಸ್ತನಿಗೆ ಬೇಥಾನ್ಯ ಎಂಬ ಊರಿನಲ್ಲಿ ಒಂದು ಕುಟುಂಬದ ಪರಿಚಯವಿತ್ತು. ಆ ಕುಟುಂಬದಲ್ಲಿ ಮಾರ್ಥ ಮರಿಯಳು ಎಂಬ ಸಹೋದರಿಯರು ಲಾಜರನೆಂಬ ಒಬ್ಬ ಸಹೋದರನೂ ಇದ್ದರು. ಕರ್ತನು ಆ ಮನೆಯನ್ನು ಸಂಧಿಸುವಾಗೆಲ್ಲಾ ಆತನ ಪ್ರಸನ್ನತೆಯನ್ನು ಆ ಕುಟುಂಬವು ಅನುಭವಿಸುತ್ತಿದ್ದದು ನಿಜವೇ ಆದರೂ ಅವರಲ್ಲಿ ಒಬ್ಬಳಾದ ಮರಿಯಳು ಮಾತ್ರವೇ ಯೇಸುಸ್ವಾಮಿಯ ಪಾದಗಳಲ್ಲಿ ಕುಳಿತಿರುತ್ತಿದ್ದಳೆಂದು ತಿಳಿಯುತ್ತೇವೆ, ಮಾತ್ರವಲ್ಲ ಇಲ್ಲಿ ಆತನ ಪ್ರಸನ್ನತೆಯ ಅನುಭವವನ್ನೂ ಆತನ ಪಾದಗಳಲ್ಲಿರುವ ಅನುಭವವನ್ನೂ ಕುರಿತು ಧ್ಯಾನಿಸೋಣ.

1) **ಕರ್ತನ ಪಾದಗಳ ಬಳಿಯಲ್ಲಿರುವದು** (ಲೂಕ. 10:39). ಮರಿಯಳು ಯೇಸುವಿನ ಪಾದಗಳಲ್ಲಿ ಕುಳಿತು ಆತನ ವಾಕ್ಯವನ್ನು ಕೇಳುತ್ತಿದ್ದಳು (ಲೂಕ. 10:39). ಆದರೆ ಅವಳ ಸಹೋದರಿಯಾದರೋ ಅನೇಕ ವಿಷಯವಾಗಿ ಗಡಿಬಿಡಿಯಲ್ಲಿದ್ದಳು. ಮರಿಯಳು ತನ್ನಿಂದ ತೆಗೆಯಲ್ಪಡಲಾರದಂಥ ಉತ್ತಮವಾದ ಭಾಗವನ್ನು ಪಡೆದುಕೊಂಡಳು. ಇದೇ ಕರ್ತನ ಪಾದದಲ್ಲಿ ಕುಳಿತಿರುವ ಉನ್ನತವಾದ ಅನುಭವ.

   ಇಂದು ಅನೇಕ ದೇವಮಕ್ಕಳು ಕರ್ತನ ಸನ್ನಿಧಿಯಲ್ಲಿ ಸ್ವಲ್ಪ ವೇಳೆ ಇದ್ದು ಅನಂತರ ತಮ್ಮ ಹಳೆಯ ದು:ಖ, ಚಿಂತೆಗಳಿಂದ ಕೂಡಿದ ಮುಖದಿಂದ ಏಳುವರು. ಏಕೆಂದರೆ ಕರ್ತನ ಸನ್ನಿಧಾನದಲ್ಲಿರುವಾಗ ಅವರು ಕರ್ತನೊಂದಿಗೆ ಮಾತಾಡುವರು. ಆದರೆ ಆತನ ಪಾದಗಳಲ್ಲಿರುವಾಗ ಅವರು ಕರ್ತನೊಂದಿಗೆ ಮಾತಾಡುವವನಾಗಿದ್ದಾನೆ. ಆ ಸಮಯದಲ್ಲಿ ನಮ್ಮ ಮಾತು ಕಡಿಮೆಯಾಗಿ ಆತನು ಮಾತಾಡುವದು ಹೆಚ್ಚಾಗಿಯೂ ಇರುವದು. ಅವನ ಫಲವು ನನ್ನ ನಾಲಿಗೆಗೆ ರುಚಿಯಾಗಿತ್ತು (ಪ್ರಸ. 2:3). ಆತನಿಂದ ಹೊರಡುವ ಮಾತುಗಳು ನಮ್ಮ ಜೀವಿತವನ್ನು ತೃಪ್ತಿಗೊಳಿಸುವದು.

   ಕರ್ತನ ಪಾದದಲ್ಲಿರುವದನ್ನು ಮರಿಯಳು ಆರಿಸಿಕೊಂಡಳು. ಇದನ್ನು ಕರ್ತನು ಹೇಳುತ್ತಾನೆ, ಇಂದು ಕರ್ತನ ಪಾದದಲ್ಲಿರುವಂಥ ಮರಿಯಳುಗಳನ್ನು ಕರ್ತನು ಹುಡುಕುತ್ತಿದ್ದಾನೆ, ಸಮಯವಿಲ್ಲ, ಕೆಲಸ ಹೆಚ್ಚು ಎಂದು ಹೇಳುವಂಥ ಮಾರ್ಥಳುಗಳ ಮಧ್ಯದಲ್ಲಿ ಆತನ ಪಾದಗಳನ್ನು ಅರಸಿ ಬರುವ ಮರಿಯಳು ಯಾರು ?

2) **ಕರ್ತನ ಪಾದದಲ್ಲಿ ಬಿದ್ದು ಗೋಳಾಡುವದು** (ಯೋಹಾ. 11:28–32). ಯೇಸು ಬೇಥಾನ್ಯಕ್ಕೆ ಬಂದಾಗ ಸತ್ತುಹೋದ ಲಾಜರನನ್ನು ಸಮಾಧಿಯಲ್ಲಿಟ್ಟು ನಾಲ್ಕು ದಿನಗಳಾಗಿದ್ದವು. ಕರ್ತನನ್ನು ಕಂಡ ಮಾರ್ಥಳು ಸ್ವಾಮೀ, ನೀನು ಇಲ್ಲಿದ್ದಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ... ಎಂದು ತನ್ನ ಅಳಲನ್ನು ತೋಡಿಕೊಂಡಳು. ಆದರೆ ಆ ಕೂಡಲೇ ಕರ್ತನು ಕ್ರಿಯೆ ನಡಿಸಲಿಲ್ಲ. ತನ್ನ ಪಾದಗಳನ್ನೇ ಹುಡುಕಿ ಬರುವ ಮರಿಯಳಿಗಾಗಿ ಕರ್ತನು ಕಾದಿದ್ದನು. ಮರಿಯಳು ಯೇಸು ಇದ್ದಲ್ಲಿಗೆ ಬಂದು, ಆತನ ಪಾದಕ್ಕೆ ಬಿದ್ದು ಗೋಳಾಡಿದಳು (ಯೋಹಾ. 11:32). ಸಹೋದರನ ಮರಣವನ್ನು ಕುರಿತು ಕರ್ತನಿಗೆ ಮಾರ್ಥಳು ಮೊದಲು ತಿಳಿಸಿದಾಗ್ಯೂ, ಯೇಸುವನ್ನು ಆತ್ಮದಲ್ಲಿ ನೊಂದುಕೊಳ್ಳುವಂತೆ ಮಾಡಿದ್ದು ಆತನ ಪಾದಕ್ಕೆ ಬಿದ್ದು ಗೋಳಾಡಿದ ಮರಿಯಳ ಆಕ್ರಂದನ, ದೇವಮಕ್ಕಳೇ ನಿಮ್ಮ ಕುಟುಂಬದ ತೀರದ ಸಮಸ್ಯೆಗಳಿಗಾಗಿ, ಪಾಪದ ಪರಿಹಾರಕ್ಕಾಗಿ ಶಾಪದಿಂದ ಬಿಡುಗಡೆ ಹೊಂದಲು, ಆತನ ಪಾದದಲ್ಲಿ ಬಿದ್ದು ಕಣ್ಣೀರಿನ ಪ್ರಾರ್ಥನೆಯನ್ನು ಸಲ್ಲಿಸಿರಿ. ಕರ್ತನು ನಿಮ್ಮ ಕಣ್ಣೀರನ್ನು ಉದಾಸೀನ ಮಾಡುವಾತನಲ್ಲ. ಸಭೆಗಾಗಿ, ಆತ್ಮಗಳಿಗಾಗಿ, ರಕ್ಷಣೆ ಹೊಂದದಿರುವವರಿಗಾಗಿ, ಹಿಂಜಾರಿ ಹೋದವರಿಗಾಗಿ, ಸೇವೆಗಳಿಗಾಗಿ, ಮಕ್ಕಳಿಗಾಗಿ, ಗಂಡನ ಅಥವಾ ಹೆಂಡತಿಯ ರಕ್ಷಣೆಗಾಗಿ, ಬಡತನದ ಬೇಗ ನೀಗಲು, ಕರ್ತನ ಪಾದದಲ್ಲಿ ಬಿದ್ದು ಗೋಳಾಡುವ ಮರಿಯಳುಗಳಾಗಿ ಬದಲಾಗಿರಿ.

3) **ಕರ್ತನ ಪಾದ ತೊಳೆದು ಸೇವೆಸಲ್ಲಿಸುವದು** (ಯೋಹಾ. 12:2) ಯೇಸುಸ್ವಾಮಿ ಬೇಥಾನ್ಯಕ್ಕೆ ಬಂದಾಗ, ಯೇಸುವು

ಗಾಯಮಾಡುವವನೂ ಗಾಯಕಟ್ಟುವವನೂ ಆತನೇ; ಹೊಡೆಯುವ ಕೈಯೇ ವಾಸಿಮಾಡುತ್ತದೆ (ಯೋಬ. 5:18).

ಸತ್ತವರೊಳಗಿಂದ ಎಬ್ಬಿಸಿದ ಲಾಜರನೂ ಅಲ್ಲಿದ್ದನು. ಯೇಸುವಿಗೆ ಔತಣ ಮಾಡಿಸಲು ಪುನ: ಮಾರ್ಥಳು ನೆರವಾಗಿದ್ದಳು. ಆಗ ಮರಿಯಳು ಎಂದಿನಂತೆ ಕರ್ತನ ಪಾದಕ್ಕೆ ಬಂದಳು. ಸುಮ್ಮನೆ ಬರಲಿಲ್ಲ ಕಣ್ಣೀರಿನ ಕಾಣಿಕೆಯೊಂದಿಗೆ, ಬೆಲೆಬಾಳುವ ಅಚ್ಚವಾದ ತೈಲದೊಂದಿಗೆ ಯೇಸುವಿಗಾಗಿಯೇ ಅದನ್ನು ತಂದು ಪಾದಕ್ಕೆ ಹಚ್ಚಿ ತನ್ನ ತಲೇಕೂದಲಿನಿಂದ ಆತನ ಪಾದವನ್ನು ಒರೆಸಿದಳು. ಮರಿಯಳು ತನ್ನ ದೀನತೆಯ ಸೇವೆ ಮಾಡಿದಳು. ಅವಳು ಹಚ್ಚಿದ ತೈಲ ಅಮೂಲ್ಯವಾದದ್ದು, ಪರಿಶುದ್ಧವಾದದ್ದು, ಬೆಲೆಯುಳ್ಳದ್ದು. ಯೇಸುಸ್ವಾಮಿಯು ಈ ಲೋಕದಲ್ಲಿದ್ದ ಕಾಲದಲ್ಲಿ ಆತನಿಗೆ ಮೆಚ್ಚಿಕೆಯಾಗಿ ಮಾಡಿದ ಈ ಕಾರ್ಯ, ಕರ್ತನಿಗೆ ಮೆಚ್ಚಿಗೆಯಾಯಿತು. ಈ ತೈಲದ ಸುವಾಸನೆ ರಕ್ಷಣೆಯ ಪರಿಮಳವಾಗಿ ಅಂದು ಕೆಲವರನ್ನು ಆತನ ಪಾದಕ್ಕೆ ತಂದಿತು. ಆದರೆ ಇಂದು ವಿಶ್ವದಾದ್ಯಂತ ರಕ್ಷಣೆಯ ಪರಿಮಳವನ್ನು ಬೀರುತ್ತಿದೆ (ಪರಮ. 1:3). ಕರ್ತನ ಪಾದದಲ್ಲಿ ಬಿದ್ದು ಗೋಳಾಡಿ ಅರಿತುಕೊಂಡ ಸತ್ಯದ (ವಾಕ್ಯದ) ಮೂಲಕ ಬಿಡುಗಡೆ ಹೊಂದುವ ಅನುಭವ (ಯೋಹಾ. 8:32). ಕರ್ತನ ಪಾದದಲ್ಲಿದ್ದು ಕೃತಜ್ಞತೆಯನ್ನು ಸಲ್ಲಿಸಿ ಸ್ತುತಿಸುವ ಅನುಭವವನ್ನು ನಿಮ್ಮದಾಗಿಸಿಕೊಳ್ಳಿರಿ. ಆತನ ಪಾದಗಳನ್ನೇ ಹಿಡಿದುಕೊಳ್ಳಿರಿ ನಿಶ್ಚಯವಾಗಿ ಆಶೀರ್ವಾದ ಹೊಂದುವಿರಿ.

ಸಂಗ್ರಹ.

# ಚಳಿಗಾಲದ ಆಹಾರ ಹೀಗಿರಲಿ

**ಆಹಾರಾಭ್ಯಾಸದಲ್ಲಿ ಬದಲಾವಣೆ**

ಪರಿಸರದ ತಾಪಮಾನ ಇಳಿಕೆಯಾಗುತ್ತಿದ್ದಂತೆ ನಮ್ಮ ಶರೀರದ ತಾಪಮಾನವೂ ಇಳಿಯುತ್ತದೆ. ಇದರ ಪರಿಣಾಮವನ್ನು ಎದುರಿಸಲು ಶರೀರವು ಚಯಾಪಚಯ ಕ್ರಿಯೆಯನ್ನು ಏರಿಸಿಕೊಳ್ಳುವ ಮೂಲಕ ಉಷ್ಣವನ್ನು ಉತ್ಪಾದಿಸಿಕೊಳ್ಳುತ್ತದೆ. ಆಹಾರದಲ್ಲಿನ ಕೊಬ್ಬಿನ ಅಂಶವನ್ನು ಕರಗಿಸುವ ಮೂಲಕ ಚಯಾಪಚಯ ಕ್ರಿಯೆ ಹೆಚ್ಚುತ್ತದೆ. ಇದರಿಂದ ಹೆಚ್ಚು ಆಹಾರಬೇಕೆಂಬ ಭಾವನೆ ನಮಗೆ ಉಂಟಾಗುತ್ತದೆ.

ಆರೋಗ್ಯ ಸ್ವರ

**ಆರೋಗ್ಯಕರ ಮೆದುಳಿಗೆ ಆಹಾರ:**

ಚಳಿಗಾಲದಲ್ಲಿ ನಿತ್ಯ ಪೌಷ್ಟಿಕಾಂಶಯುಕ್ತ ಆಹಾರ, ವಿಟಮಿನ್, ಖನಿಜಾಂಶ ಒಳಗೊಂಡಿರುವ ಆಹಾರ ಸೇವಿಸಬೇಕು. ಇದರಿಂದ ಶರೀರ ಬೆಚ್ಚಗಿರುತ್ತದೆ. ಮೆದುಳನ್ನು ಚುರುಕಾಗಿಸುತ್ತವೆ. ಚರ್ಮದ ಆರೋಗ್ಯ ಕಾಪಾಡುತ್ತದೆ.

**ನಿತ್ಯದ ಆಹಾರಾಭ್ಯಾಸ ಇಂತಿರಲಿ:** ಬಾದಾಮಿ : ನಿಯಮಿತವಾಗಿ ಬಾದಾಮಿ ಸೇವನೆಯಿಂದ ಅಗತ್ಯ ಚೈತನ್ಯ.

ದೈಹಿಕ ಶಕ್ತಿ, ಮಾನಸಿಕ ಚೈತನ್ಯ ಪಡೆಯಬಹುದು. ಲವಲವಿಕೆಯಿಂದ ಇರಬಹುದು. ಬಾದಾಮಿಯಲ್ಲಿ ಮೆದುಳು ಮತ್ತು ಹೃದಯದ ಆರೋಗ್ಯಕ್ಕೆ ಒಳ್ಳೆಯದು. ಬಾದಾಮಿಯಲ್ಲಿ ಅಗತ್ಯವಾದ ಎಲ್ಲ ಪೌಷ್ಟಿಕಾಂಶಗಳೂ ಮಿಳಿತವಾಗಿರುತ್ತವೆ. ಇದು ಆರೋಗ್ಯಕರ ಜೀವನಕ್ಕೆ ನೆರವಾಗುತ್ತದೆ. ಬಾದಾಮಿ ಕೊಲೆಸ್ಟ್ರಾಲ್ ಅಂಶವನ್ನು ಕಡಿಮೆ ಮಾಡಲು ಸಹಕರಿಸುತ್ತದೆ. ಹೃದಯದ ಕಾಯಿಲೆಯನ್ನು ದೂರ ಮಾಡಲು ಸಹಕರಿಸುತ್ತದೆ.

ಕೇವಲ ಒಂದು ಔನ್ಸ್‌ನಷ್ಟು ಬಾದಾಮಿ 13 ಗ್ರಾಂನಷ್ಟು ಸಾಂದ್ರವಲ್ಲದ ಕೊಬ್ಬಿನಂಶ ಹೊಂದಿರುತ್ತದೆ. ಕೇವಲ ಒಂದು ಗ್ರಾಂ ಸಾಂದ್ರತೆಯ ಕೊಬ್ಬು ಅದರಲ್ಲಿ ಇರುತ್ತದೆ. ಈ ಮೂಲಕ, ಕೊಲೆಸ್ಟ್ರಾಲ್ ಅನ್ನು ದೂರ ಇರಿಸುತ್ತದೆ. ಆದ್ದರಿಂದ ದಿನವನ್ನು ಬಾದಾಮಿಯೊಂದಿಗೆ ಪ್ರಾರಂಭಿಸಿ.

**ಮೀನು :** ಮೀನನ್ನು ತಿನ್ನುವುದರಿಂದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಬಹುದು. ಅಗತ್ಯವಾದ ಪೌಷ್ಟಿಕಾಂಶವೂ ಲಭಿಸುತ್ತದೆ. ಇದರಲ್ಲಿ ಉತ್ತಮ ಡಿಎಚ್‌ಎ (ಫ್ಯಾಟಿ ಆಸಿಡ್) ಇರುತ್ತದೆ. ಇದು ನರವ್ಯೂಹವನ್ನು ಬಲಪಡಿಸುತ್ತದೆ. ಅಗತ್ಯವಾದ ಹಲವು ಪೌಷ್ಟಿಕಾಂಶಗಳು ಲಭಿಸುತ್ತವೆ.

**ಹಸಿರೆಲೆಗಳು :** ಕ್ಯಾಬೇಜ್, ಹೂಕೋಸು, ಹರಿವೆ ಸೊಪ್ಪು ಮುಂತಾದ ಹಸಿರೆಲೆ, ತರಕಾರಿಗಳಿಂದ ವಿಟಮಿನ್ ಎ,ಸಿ,ಕೆ, ಇ ಮುಂತಾದವು ಲಭಿಸುತ್ತವೆ. ವಿಟಮಿನ್ ಎ,ಸಿ ಮತ್ತು ಇ ಮೆದುಳಿನ ಶಕ್ತಿಯನ್ನು ಹೆಚ್ಚಿಸುತ್ತವೆ. ತರಕಾರಿಗಳು ಬಿ 6 ಮತ್ತು ಇತರ ಪೌಷ್ಟಿಕಾಂಶಗಳನ್ನು ಒಳಗೊಂಡಿರುತ್ತವೆ.

**ಕಾರ್ಬೋಹೈಡ್ರೇಟ್‌ಯುಕ್ತ ಆಹಾರ:** ನಮಗೆ ಉತ್ತಮ ಕಾರ್ಬೋಹೈಡ್ರೇಟ್ ಯುಕ್ತ ಆಹಾರ ಅಗತ್ಯ. ಸಿರೋಟೋನಿನ್ ಉತ್ಪಾದಿಸುವ ಇದು ಮೆದುಳಿನ ಆರೋಗ್ಯಕ್ಕೆ ಉತ್ತಮ. ಅಲ್ಲದೆ ಸುಖ ನಿದ್ರೆಗೆ ನೆರವಾಗುತ್ತದೆ. ಧಾನ್ಯ, ಬಾರ್ಲಿ, ದವಸ ಧಾನ್ಯಗಳು, ಆಲೂಗಡ್ಡೆ ಇತ್ಯಾದಿಗಳಲ್ಲಿ ಉತ್ತಮ ಕಾಬೋಹೈಡ್ರೇಟ್ ಅಂಶ ಇರುತ್ತದೆ.

*– ಸಂಗ್ರಹ.*

ಅವನು ನನ್ನಲ್ಲಿ ಆಸಕ್ತನಾಗಿರುವದಿಂದ ಅವನನ್ನು ರಕ್ಷಿಸುವೆನು; ನನ್ನ ನಾಮವನ್ನು
ಅರಿತವನಾಗಿರುವದರಿಂದ ಅವನನ್ನು ಉದ್ಧರಿಸುವೆನು (ಕೀರ್ತ. 91:14).

# ಜಾಹಿರಾತು


ನಿಮಗೆ ಶಾಲೆಯ ಯೂನಿಫಾರಂ ಮತ್ತು ದೇವರ ವಾಕ್ಯದ ಟಿ–ಶರ್ಟ್ ಬೇಕಾದಲ್ಲಿ ನಾವು ಮಾಡಿಕೊಡುತ್ತೇವೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 9844265602.**

## ಬೇಕಾಗಿದ್ದಾರೆ

ಒಂದು ಒಳ್ಳೆಯ ಕ್ರೈಸ್ತ ಸೇವಾ ಸಂಸ್ಥೆಗೆ Accountant ಬೇಕಾಗಿದ್ದಾರೆ

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0820–2002781, 9902334941.**

## ಬೇಕಾಗಿದ್ದಾರೆ

24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುವ ಪ್ರಾರ್ಥನಾ ವೀರರು ಬೇಕಾಗಿದ್ದಾರೆ. ಊಟ, ವಸತಿ ಸೌಕರ್ಯವನ್ನು ನೀಡಲಾಗುವುದು. ಪ್ರಾರ್ಥನೆ ಮಾಡಲು ಇಚ್ಛಿಸುವವರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941.**

ನೀವು ನಮ್ಮ ಅನಾಥಾಶ್ರಮದಲ್ಲಿ ಸೇವೆ ಮಾಡಲು ಇಷ್ಟಪಡುವುದಾದರೆ

ನಮ್ಮನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781.**


ನಿನ್ನ ಜೀವಮಾನವೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು

(ಯೆಹೋ. 1:5).

## ಈ ವಾಕ್ಯಗಳು ಎಲ್ಲಿವೆ?

ಮಕ್ಕಳ ಸ್ವರ

1) ಆದಾಮನು ಎಷ್ಟು ವರ್ಷ ಜೀವಿಸಿದನು ?
2) ಅಮ್ಮೋನಿಯರಿಗೆ ಮೂಲಪುರುಷ ಅಥವಾ ಮೂಲತಂದೆ ಯಾರು?
3) ದೇವರು ಹಾಗರಳಿಗೂ ಆಕೆಯ ಮಗನಿಗೂ ಯಾವ ಅರಣ್ಯದಲ್ಲಿ ಅಥವಾ ಮರುಭೂಮಿಯಲ್ಲಿ ನೀರಿನ ಒರತೆಯನ್ನು ಹುಟ್ಟಿಸಿದನು?
4) ಮೋಶೆಗೆ ವಿರೋಧವಾಗಿ ಮಾತಾಡಿದ್ದಕ್ಕೆ ಕುಷ್ಠ ವ್ಯಾಧಿಯಾಗಿ ಮಾರ್ಪಟ್ಟಿದ್ದು ಯಾರು?
5) ಸೊಲೋಮೋನನನ್ನು ಪರೀಕ್ಷಿಸಲು ಬಂದವರು ಯಾರು?
6) ದೇವರು ಕುರುಡನಾಗಿದ್ದ ಸೌಲನನ್ನು ಸ್ವಸ್ಥಪಡಿಸಲು ಯಾರನ್ನು ಕಳುಹಿಸಿದನು?
7) ಸಹೋದರರು ಇಲ್ಲದಕ್ಕೆ ತಂದೆಯ ಆಸ್ತಿಯಲ್ಲಿ ತಮಗೆ ಭಾಗ ಬರುವಂತೆ ಮಾಡು ಎಂದು ಮೋಶೆಯನ್ನು ಕೇಳಿದ್ದು ಯಾರು ?
8) ದೇವರಿಗೆ ತಿರುಗಿ ಬಿದ್ದ ದೂತನು ಯಾರು?
9) ದೇವರು ಮೊಟ್ಟ ಮೊದಲನೇದಾಗಿ ಸೃಷ್ಟಿಸಿದ್ದು ಯಾವುದನ್ನು ?
10) ದೇವರು ಸೃಷ್ಟಿ ಕಾರ್ಯವನ್ನು ಮುಗಿಸಿ ಎಷ್ಟನೇ ದಿನದಲ್ಲಿ ವಿಶ್ರಮಿಸಿದನು ?

---

### ಮೇ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :

1) ಉಜ್ಜೀಯ (ಅಜರ್ಯ) ಯೋಥಾಮ, ಆಹಾಜ ಮತ್ತು ಹಿಜ್ಕೀಯ (ಯೆಶಾ. 1:1).
2) ಇಬ್ಬರು ಗಂಡು ಮಕ್ಕಳು 1. ಶೆಯಾರ್ ಯಾಶೂಬ್ (ಯೆಶಾ. 7:3) 2. ಮಹೇರ್ ಶಲಾಲ್ ಹಾಷ್ ಬಜ್ (ಯೆಶಾ. 8:3).
3) ಮೂರು ವರ್ಷ – (ಯೆಶಾ. 20:3).
4) ದೇವರ ಅಗ್ನಿವೇದಿ ಅಥವಾ ದೇವರ ಸಿಂಹ (ಯೆಶಾ. 29:1).
5) ಯೆಹೋಯಾಕೀಮ್, ಯೋಷೀಯ, ಯೆಹೋಯಾಖೀನ್ ಮತ್ತು ಚಿದ್ಕೀಯನು (ಯೆರೆ. 1:2–3).
6) ಯೆಹೂದ ದೇಶದವರಿಗೆ
7) ಹೆಫ್ಸೀಬಾ (ಯೆಶಾ. 62:4).
8) ಬೆಯೂಲಾ (ಯೆಶಾ. 62:4).
9) ಆರು ದಿನಗಳಲ್ಲಿ
10) ಏದೆನ್ ವನದಲ್ಲಿ.

---

## ಡಿಜಿಎಮ್ ಬೇತೇಲ್ ಅಂಕಣ

- ಕರ್ತನ ಕೃಪೆಯಿಂದ ಪಾ॥ ಸುನಿಲ್ ಜಾನ್ ಡಿ'ಸೋಜಾರವರ ಕುಟುಂಬವು ವಿದೇಶ ಸೇವೆಯನ್ನು ಮುಗಿಸಿ ಮರಳಿದ್ದಾರೆ.
- ಆರಾಧನಾ ಶಾಲೆಯ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಯಿತು.

ನನ್ನ ಧರ್ಮವನ್ನು ಹತ್ತಿರಕ್ಕೆ ಬರಮಾಡುವೆನು, ಅದು ಇನ್ನು ದೂರವಾಗಿರದು,
ನನ್ನ ರಕ್ಷಣೆಯು ತಡವಾಗದು (ಯೆಶಾ. 46:13).